# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ


ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ಏಪ್ರಿಲ್ 23, 2023

ಸಂಪುಟ : 49  ಸಂಚಿಕೆ : 341  ☎ 254736  91642 99999  RNI No: 27369/75  KA/SK/CTA-275/2021-2023. O/P @ B.V. Nagar P.O.  ಪುಟ : 8  ರೂ : 5.00  www.janathavani.com  janathavani@mac.com







# ಎರಡು-ಮೂರನೇ ಹಂತದಲ್ಲಿರುವ ಕ್ಷೇತ್ರಗಳ ಮೇಲೆ ನಾಯಕರ ಕಣ್ಣು

## ಕಾಂಗ್ರೆಸ್-ಜೆಡಿಎಸ್ ಪ್ರಭಾವ ಇರುವ ಕಡೆ ಮೋದಿ ಪ್ರಚಾರ

ಬೆಂಗಳೂರು, ಏ. 22 - ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ. ಕುಮಾರಸ್ವಾಮಿ ಸೇರಿದಂತೆ ಕಾಂಗ್ರೆಸ್ - ಜೆಡಿಎಸ್ ಪ್ರಭಾವವಿರುವ 30ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ತಮ್ಮ ಪಕ್ಷವು ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ಮಾಡಲಿದ್ದಾರೆ.

ಬಿಜೆಪಿ ಯಾವ ಕ್ಷೇತ್ರದಲ್ಲಿ ಎರಡು ಮತ್ತು ಮೂರನೇ ಸ್ಥಾನದಲ್ಲಿದೆಯೋ ಅಂತಹ ಕ್ಷೇತ್ರಗಳಲ್ಲಿ ತಮ್ಮ ವರ್ಚಸ್ಸಿನ ಮೂಲಕ ಮತದಾರರನ್ನು ಸೆಳೆಯಲು ಪ್ರಧಾನಿ ಪ್ರವಾಸ ನಿಗದಿ ಮಾಡಿದೆ.

ಕಂದಾಯ ಸಚಿವ ಆರ್. ಅಶೋಕ್ ಕನಕಪುರ ವಿಧಾನಸಭಾ ಕ್ಷೇತ್ರದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಕಣಕ್ಕಿಳಿದಿದ್ದಾರೆ.

ತಮ್ಮ ಅಭ್ಯರ್ಥಿ ಅಶೋಕ್ ಪರ ಮೋದಿ ಅವರು, ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ರೋಡ್ ಶೋ ನಡೆಸಲಿದ್ದಾರೆ.

ಕಳೆದ ಎರಡು ದಿನಗಳಿಂದ ರಾಜ್ಯ ಪ್ರವಾಸದಲ್ಲಿರುವ ಕೇಂದ್ರ ಗೃಹ ಸಚಿವ ಅಮಿತ್ ಷಾ ತಡರಾತ್ರಿ ರಾಜ್ಯ ಬಿಜೆಪಿ ಮುಖಂಡರೊಟ್ಟಿಗೆ ಚುನಾವಣಾ ತಂತ್ರಗಾರಿಕೆಗೆ ಸಂಬಂಧಿಸಿದಂತೆ ನಡೆದ ಚರ್ಚೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.


ಸಿದ್ದರಾಮಯ್ಯ ಅವರು ಸ್ಪರ್ಧಿಸಿರುವ ವರುಣಾ ಕ್ಷೇತ್ರವನ್ನು ತುಂಬಾ ಗಂಭೀರವಾಗಿ ತೆಗೆದುಕೊಂಡಿರುವ ಬಿಜೆಪಿ, ಈ ಕ್ಷೇತ್ರದಲ್ಲಿ ತಮ್ಮ ಪಕ್ಷದ ಅಭ್ಯರ್ಥಿ ಸೋಮಣ್ಣ ಪರ ಪ್ರಧಾನಿಯವರು ರೋಡ್ ಶೋ ನಡೆಸಲಿದ್ದಾರೆ.

ಅಷ್ಟೇ ಅಲ್ಲ, ಸೋಮಣ್ಣ ಅವರು ಸ್ಪರ್ಧಿಸಿರುವ ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲೂ ಪ್ರಧಾನಿಯವರು ಪ್ರಚಾರ ಮಾಡಲಿದ್ದಾರೆ.

ಜೆಡಿಎಸ್‌ನ ಕುಮಾರಸ್ವಾಮಿ ಸ್ಪರ್ಧಿಸಿರುವ ಚನ್ನಪಟ್ಟಣ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪುತ್ರ ಪ್ರಿಯಾಂಕ ಖರ್ಗೆ (2ನೇ ಪುಟಕ್ಕೆ)


## 36 ಗಂಟೆಗಳಲ್ಲಿ 5,300 ಕಿ.ಮೀ. ಮೋದಿ ಪ್ರಯಾಣ

ನವದೆಹಲಿ, ಏ. 22 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 36 ಗಂಟೆಗಳಲ್ಲಿ 5,300 ಕಿ.ಮೀ. ಪ್ರಯಾಣ ನಡೆಸಿ ಎರಡು ರಾಜ್ಯ ಹಾಗೂ ಒಂದು ಕೇಂದ್ರಾಡಳಿತ ಪ್ರದೇಶಗಳಲ್ಲಿನ 8 ನಗರಗಳ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ.



ಸೋಮವಾರ ದೆಹಲಿಯಿಂದ ಮಧ್ಯ ಪ್ರದೇಶ, ಕೇರಳ ಹಾಗೂ ದಾದ್ರಾ ಮತ್ತು ನಗರ ಹವೇಲಿಗಳಿಗೆ ಭೇಟಿ ನೀಡಿ, ನಂತರ ಮಂಗಳವಾರದಂದು ರಾಜಧಾನಿಗೆ ವಾಪಸ್ಸಾಗಲಿದ್ದಾರೆ.

ಪ್ರಧಾನಿ ಮೋದಿ ಅವರು ದೆಹಲಿಯಿಂದ ಖಜುರಾಹೋಗೆ ತೆರಳಿ, ನಂತರ ರೇವಾದಲ್ಲಿ ನಡೆಯಲಿರುವ ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಂತರ ಖಜುರಾಹೋಗೆ ವಾಪಸ್ಸಾಗಿ (2ನೇ ಪುಟಕ್ಕೆ)



## ವಾಗೀಶ ಸ್ವಾಮಿ ನಾಮಪತ್ರ ತಿರಸ್ಕೃತ ಪತ್ನಿ ನಾಮಪತ್ರ ಕ್ರಮಬದ್ಧ



ದಾವಣಗೆರೆ, ಏ. 22- ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಬಿ.ಎಂ. ವಾಗೀಶ ಸ್ವಾಮಿ ಅವರ ಜಾತಿ ಪ್ರಮಾಣ ಪತ್ರವನ್ನು ರದ್ದುಪಡಿಸಿದ ಹಿನ್ನೆಲೆಯಲ್ಲಿ, ಅವರು ಸಲ್ಲಿಸಿದ್ದ 3 ನಾಮಪತ್ರಗಳು ತಿರಸ್ಕೃತಗೊಂಡಿವೆ. ಹಲವರ ವಿರೋಧದ ನಡು ವೆಯೂ ವಾಗೀಶ ಸ್ವಾಮಿ ಅವರು ಮಾಯಕೊಂಡ ವಿಧಾನಸಭಾ ಮೀಸಲು ಕ್ಷೇತ್ರದಿಂದ ಪಕ್ಷೇತರರಾಗಿ ಮೂರು ನಾಮಪತ್ರಗಳನ್ನು ಸಲ್ಲಿಸಿದ್ದರು.

ಆದರೆ, ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಶಿಫಾರಸ್ಸಿನಂತೆ ವಾಗೀಶ್ ಅವರ ಜಾತಿ ಪ್ರಮಾಣ ಪತ್ರವನ್ನು ರದ್ದುಗೊಳಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ನಾಮಪತ್ರಗಳನ್ನೂ ತಿರಸ್ಕರಿಸಲಾಗಿದೆ. ಈ ಕುರಿತು ತಾವು ಹೈಕೋರ್ಟ್ ಮೊರೆ ಹೋಗುವುದಾಗಿ ವಾಗೀಶ್ ಹೇಳಿದ್ದಾರೆ. ವಾಗೀಶ್ ಅವರ ಪತ್ನಿ ಪುಷ್ಪಾ ಬಿ.ಎಂ. ಪಕ್ಷೇತರರಾಗಿ ಸಲ್ಲಿಸಿರುವ ನಾಮಪತ್ರ ಕ್ರಮಬದ್ಧವಾಗಿದೆ.

## ಲಿಥಿಯಂ ಉದ್ಯಮದ ಮೇಲೆ ಸರ್ಕಾರಿ ನಿಯಂತ್ರಣ

### ಚಿಲಿ ಕ್ರಮದಿಂದ ಉದ್ಯಮದಲ್ಲಿ ಬೇಸರ

ಸಾಂಟಿಯಾಗೋ, ಏ. 22 - ಎಲೆಕ್ಟ್ರಿಕ್ ವಾಹನಗಳ ಬಳಕೆ ಹೆಚ್ಚಿದಂತೆ ಲಿಥಿಯಂ ಬೇಡಿಕೆಯೂ ಹೆಚ್ಚಾಗುತ್ತಿದೆ. ಈ ನಡುವೆಯೇ, ವಿಶ್ವದ ಎರಡನೇ ಅತಿ ದೊಡ್ಡ ಲಿಥಿಯಂ ಉತ್ಪಾದನಾ ದೇಶವಾದ ಚಿಲಿ, ತನ್ನಲ್ಲಿರುವ ಉದ್ಯಮಗಳ ಮೇಲೆ ಸರ್ಕಾರಿ ನಿರ್ಬಂಧ ಹೇರಿದೆ. ಬ್ಯಾಟರಿಗಳ ಉತ್ಪಾದನೆಗೆ ಲಿಥಿಯಂ ಬಳಸಲಾಗುತ್ತದೆ.

ಚಿಲಿಯಲ್ಲಿರುವ ಲಿಥಿಯಂ ಬಳಸಲು ಬಯಸುವ ಕಂಪನಿಗಳು ಸರ್ಕಾರದ ಜೊತೆ ಸಹಭಾಗಿತ್ವ ಹೊಂದುವುದು ಕಡ್ಡಾಯ ಎಂದು ಚಿಲಿ ಅಧ್ಯಕ್ಷ ಗೇಬ್ರಿಯಲ್ ಬೋರಿಕ್ ತಿಳಿಸಿದ್ದಾರೆ.

ಪ್ರತಿಯೊಬ್ಬ ಸಹಭಾಗಿಯ ಹಿತವನ್ನು ಸರ್ಕಾರ ನಿಯಂತ್ರಿಸಲಿದೆ ಎಂದು ಬೋರಿಕ್ ಹೇಳಿದ್ದಾರೆ. ಕೆಲವರು ಇದನ್ನು (5ನೇ ಪುಟಕ್ಕೆ)

## ರಾಹುಲ್ ಗಾಂಧಿ ಬಂಗಲೆ ತೆರವು

ನವದೆಹಲಿ, ಏ. 22 – ಲೋಕಸಭಾ ಸ್ಥಾನದಿಂದ ಅನರ್ಹಗೊಂಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ದೆಹಲಿಯ ಲ್ಯೂಟನ್ಸ್‌ನಲ್ಲಿ ತಾವು ಹೊಂದಿದ್ದ ಅಧಿಕೃತ ಬಂಗಲೆಯನ್ನು ತೆರವುಗೊಳಿಸಿದ್ದಾರೆ. ಅವರು ತಮ್ಮ ತಾಯಿ ಸೋನಿಯಾ ಗಾಂಧಿ ಅವರ ನಿವಾಸಕ್ಕೆ ತೆರಳಿದ್ದಾರೆ.

ಇದುವರೆಗೂ ಅವರು ತುಘಲಕ್ ಲೇನ್‌ನಲ್ಲಿರುವ (5ನೇ ಪುಟಕ್ಕೆ)







# ಹರಿಹರದಲ್ಲಿ ರಂಜಾನ್ ಆಚರಣೆ : ಸಾಮೂಹಿಕ ಪ್ರಾರ್ಥನೆ

ಹರಿಹರ, ಏ. 22 - ಮುಸ್ಲಿಂ ಸಮುದಾಯದ ಬಾಂಧವರು ರಂಜಾನ್ ಹಬ್ಬವನ್ನು ಶನಿವಾರ ತಾಲ್ಲೂಕಿನಾದ್ಯಂತ ಶ್ರದ್ಧಾ - ಭಕ್ತಿಯಿಂದ ಆಚರಿಸಿದರು.

ಅಂಜುಮನ್ ಶಾಲೆ ಸಮೀಪದ ಈದ್ಗಾ ಮೈದಾನ ಹಾಗೂ ಜೈಭೀಮ ನಗರ ಸಮೀಪದ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆಯನ್ನು ಸಲ್ಲಿಸಿದರು. ಜೈ ಭೀಮ ನಗರ ಸಮೀಪದ ಈದ್ಗಾ ಮೈದಾನದಲ್ಲಿ ಮಹಿಳೆಯರೂ ಸಾಮೂಹಿಕ ಪ್ರಾರ್ಥನೆಯಲ್ಲಿ ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಪ್ರಾರ್ಥನೆ ನಂತರ ಪ್ರವಚನ ನೀಡಿದ ಧಾರ್ಮಿಕ ಗುರುಗಳು, ಒಂದು ತಿಂಗಳು ಆಚರಿಸಿದ ಉಪವಾಸ ವ್ರತದ ಸಮಾಪ್ತಿಯನ್ನು ಘೋಷಿಸುತ್ತಾ, ಕೇವಲ ಉಪವಾಸ ಇದ್ದರೆ ಸಾಲದು, ಈ ಮಾಸದಲ್ಲಿ ಸ್ಥಿತಿವಂತರು ತಮ್ಮ ಆಸ್ತಿ, ಅಂತಸ್ತಿಗನುಸಾರವಾಗಿ ದಾನ, ಧರ್ಮ ಮಾಡಬೇಕಿದೆ ಎಂದರು.

ಈ ಉಪವಾಸಗಳ ಮೂಲಕ ಇನ್ನೊಬ್ಬರ ಹಸಿವೆ, ಬಾಯಾರಿಕೆಯನ್ನು ನಮ್ಮ ಅನುಭವಕ್ಕೆ ತರಬೇಕು.



ದುರ್ಬಲರ ಬದುಕನ್ನು ಆಲೋಚನೆಗೆ ಹಚ್ಚಬೇಕು. ಇನ್ನೊಬ್ಬನ ಹಸಿವು, ದಾಹವನ್ನು ಸ್ವಯಂ ಅನುಭವಿಸಿಕೊಂಡು ಅವರಿಗಾಗಿ ಮಿಡಿಯುವ ಗುಣವನ್ನು ಮೈಗೂಡಿಸಿಕೊಳ್ಳುವುದು ದೇವನಿಗೆ ಇಷ್ಟ ಎಂಬ ಸೊಗಸಾದ ಮತ್ತು ಮಾನವೀಯತೆಯ ಜೀವನ ಪಾಠವನ್ನು ರಂಜಾನ್ ಪ್ರಸ್ತುತಪಡಿಸುತ್ತದೆ ಎಂದರು.

ಮಿತಾಹಾರ ಸೇವನೆ ಮತ್ತು ಸರಳತೆಯ ಪ್ರಜ್ಞೆಯನ್ನು ನಮ್ಮಲ್ಲಿ ಬೆಳೆಸಬೇಕು. ಇದು ಸಹಾನುಭೂತಿಯ ತಿಂಗಳಾಗಿದೆ. ನಿಮ್ಮ ದುರ್ಬಲ ಸಹೋದರ-ಸಹೋದರಿಯರ ಬಗ್ಗೆಯೂ ಕಾಳಜಿ ವಹಿಸಿರಿ ಎಂಬ ಸಂದೇಶ ಈ ಹಬ್ಬದಾಚರಣೆಯಲ್ಲಿದೆ ಎಂದರು.

ರಂಜಾನ್‌ಗೆ ಮತ್ತೊಂದು ಮುಖವಿದೆ. ಅದುವೆ ಅಧ್ಯಾತ್ಮದ್ದು. ಅದು ಹಸಿವನ್ನು ಅಧ್ಯಾತ್ಮದ ಜೊತೆಗೆ ಜೋಡಿಸುತ್ತದೆ. ಮನದ ಕೊಳೆಯನ್ನು ನೀಗಿಸುವ ಪವಿತ್ರ ತಿಂಗಳು. ಉಪವಾಸ ಅಲ್ಲಾಹನ ಆರಾಧನೆ, ಕುರ್‌ಆನ್ ಪಾರಾಯಣ, ಪ್ರಾರ್ಥನೆ, ಐದು ಜಾಗರಣೆಯಲ್ಲಿ ಕಳೆಯುವ ಮಾಸವಾಗಿದೆ ಎಂದು ತಿಳಿಸಿದರು.

ಮಕ್ಕಳು ಹೊಸ ಬಟ್ಟೆ ತೊಟ್ಟು ಸಂಭ್ರಮಿಸಿದರು. ಮನೆಗಳಲ್ಲಿ ಶ್ಯಾವಿಗೆಯಿಂದ ತಯಾರಿಸುವ ಶಿರಕುಂಬ ಸಿಹಿ ಸೇರಿದಂತೆ ವಿವಿಧ ವಿಶೇಷ ಅಡುಗೆ ಮಾಡಿ ಸವಿಯಲಾಯಿತು. ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡುವ ದೃಶ್ಯ ಕಂಡು ಬಂತು.

ಈ ಎರಡೂ ಈದ್ಗಾ ಮೈದಾನಗಳಿಗೆ ಆಗಮಿಸಿದ್ದ ವಿಧಾನಸಭಾ ಕ್ಷೇತ್ರದ ವಿವಿಧ ಪಕ್ಷಗಳ ಅಭ್ಯರ್ಥಿಗಳು ಹಬ್ಬದ ಶುಭಾಶಯ ಕೋರಿದರು.

## ನಗರದಲ್ಲಿ ಇಂದು ಶ್ರೀ ಗುರು ಬಸವಣ್ಣನವರ ಪಲ್ಲಕ್ಕಿ ಉತ್ಸವ



112ನೇ ವರ್ಷದ ಬಸವ ಜಯಂತ್ಯೋತ್ಸವದ ಪ್ರಯುಕ್ತ ಶ್ರೀ ವಿರಕ್ತ ಮಠ ಮತ್ತು ಲಿಂಗಾಯತ ತರುಣ ಸಂಘ ಇವರ ಜಂಟಿ ಆಶ್ರಯದಲ್ಲಿ ಬಸವ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ವಿರಕ್ತ ಮಠ - ಶ್ರೀ ಶಿವಯೋಗಾ ಶ್ರಮದ ಶ್ರೀ ಬಸವಪ್ರಭು ಸ್ವಾಮೀಜಿ ತಿಳಿಸಿದ್ದಾರೆ.

ಇಂದು 7.30ಕ್ಕೆ ಬಸವ ಮನೋಹರ ಭಾವಚಿತ್ರದೊಂದಿಗೆ ಬಸವಾದಿ ಶರಣರ ವಚನ ಗ್ರಂಥ ಮೆರವಣಿಗೆ ಏರ್ಪಾಡಾಗಿದೆ. ಶ್ರೀ ವಿರಕ್ತ ಮಠದಿಂದ ಆರಂಭಗೊಳ್ಳುವ ಮೆರವಣಿಗೆಯು ರಾಜ ಬೀದಿಗಳಲ್ಲಿ ಸಂಚರಿಸಲಿದೆ ಎಂದು ಲಿಂಗಾಯತ ತರುಣ ಸಂಘದ ಸಂಚಾಲಕ ಕಣಕುಪ್ಪಿ ಮುರುಗೇಶಪ್ಪ ತಿಳಿಸಿದ್ದಾರೆ.

ಬೆಳಿಗ್ಗೆ 9.30ಕ್ಕೆ ನಡೆಯುವ ಶ್ರೀ ಗುರು ಬಸವಣ್ಣನವರ ತೊಟ್ಟಿಲು ಕಾರ್ಯಕ್ರಮದಲ್ಲಿ ಸಣ್ಣ ಮಕ್ಕಳಿಗೆ ನಾಮಕರಣ ಮಾಡಲಾಗುವುದು.

ನಂತರ ಬೆಳಿಗ್ಗೆ 10.30ಕ್ಕೆ ಲಿಂ. ಶ್ರೀ ಮೃತ್ಯುಂಜಯ ಅಪ್ಪಗಳವರ ಹಾಗೂ ಕರ್ನಾಟಕ ಗಾಂಧಿ ಲಿಂ. ಹರ್ಡೇಕರ್ ಮಂಜಪ್ಪನವರ ಸ್ಮರಣೋತ್ಸವವನ್ನು ಶ್ರೀ ಶಿವಯೋಗಾಶ್ರಮದಲ್ಲಿ ಹಮ್ಮಿಕೊಳ್ಳಲಾಗಿದೆ. ಇದೇ ಸಂದರ್ಭದಲ್ಲಿ ಚಿತ್ರದುರ್ಗದ ಜಾನಪದ ಕಲಾವಿದ ಗಂಜಿಗಟ್ಟೆ ಕೃಷ್ಣಮೂರ್ತಿ ಅವರಿಂದ ವಚನ ಸಂಗೀತ ಏರ್ಪಾಡಾಗಿದೆ.

## ನಗರದ ಕಾಯಿಪೇಟೆಯಲ್ಲಿ ಇಂದು ಬಸವ ಜಯಂತ್ಯೋತ್ಸವ



ಕಾಯಿಪೇಟೆ ಶ್ರೀ ಬಸವೇಶ್ವರ ನಗರದಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಶ್ರೀ ಬಸವೇಶ್ವರ ಜಯಂತ್ಯೋತ್ಸವ ಇಂದು ನಡೆಯಲಿದೆ.

ಇಂದು ಮುಂಜಾನೆ 6 ಗಂಟೆಗೆ ತೊಟ್ಟಿಲು ಪೂಜೆ, ಸಂಜೆ 7 ಗಂಟೆಗೆ ವಿದ್ಯುತ್ ಅಲಂಕೃತವಾದ ಭವ್ಯವಾದ ಹೂವಿನ ಮಂಟಪದಲ್ಲಿ ಶ್ರೀ ಬಸವೇಶ್ವರ ಮೂರ್ತಿಯ ಮೆರವಣಿಗೆ ರಾಜಬೀದಿಗಳಲ್ಲಿ ಜರುಗಲಿದೆ.

ಬಸವ ಜಯಂತಿ ಪ್ರಯುಕ್ತ ನಾಡಿದ್ದು ದಿನಾಂಕ 24ರ ಸೋಮವಾರ ಸರ್ವ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.

## ಗೋಶಾಲೆಯಲ್ಲಿ ಇಂದು ಬಸವ ಜಯಂತಿ

ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಜಿಲ್ಲಾ ಹಾಗೂ ನಗರ ಮಹಿಳಾ ಘಟಕಗಳ ಸಹಯೋಗದೊಂದಿಗೆ ಇಂದು ಬೆಳಿಗ್ಗೆ 11.30ಕ್ಕೆ ಬಸವ ಜಯಂತಿಯ ಪ್ರಯುಕ್ತ ಆವರಗೆರೆಯಲ್ಲಿರುವ ಗೋಶಾಲೆಯಲ್ಲಿ ಬಸವ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಮಾಜದ ಬಂಧುಗಳು ಕಾರ್ಯಕ್ರಮದಲ್ಲಿ ಭಾಗವಹಿಸುವ ಜೊತೆಗೆ ಅಕ್ಕಿ, ಬೆಲ್ಲ, ಕರ್ಬೂಜ ಹಣ್ಣನ್ನು ಗೋವುಗಳಿಗೆ ನೀಡಲು ತರಬಹುದಾಗಿದೆ ಎಂದು ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಸುಷ್ಮಾ ಪಾಟೀಲ್ ಹಾಗೂ ನಗರ ಘಟಕದ ಅಧ್ಯಕ್ಷೆ ವೀಣಾ ನಟರಾಜ್ ಬೆಳ್ಳೂಡಿ ತಿಳಿಸಿದ್ದಾರೆ.

# ಮಲೇಬೆನ್ನೂರಿನಲ್ಲಿ ಸಂಭ್ರಮದ ರಂಜಾನ್



ಮಲೇಬೆನ್ನೂರು, ಏ. 22- ಪಟ್ಟಣದಲ್ಲಿ ಶನಿವಾರ ಮುಸ್ಲಿಂ ಬಾಂಧವರು ಪವಿತ್ರ ರಂಜಾನ್ ಹಬ್ಬ ವನ್ನು ಸಂಭ್ರಮದಿಂದ ಆಚರಿಸಿದರು.

ಒಂದು ತಿಂಗಳು ಕಾಲ ಶ್ರದ್ಧಾ-ಭಕ್ತಿಯಿಂದ ಉಪವಾಸ ವ್ರತ ಆಚರಿಸಿದ ಮುಸ್ಲಿಂ ಬಾಂಧವರು ಶುಕ್ರವಾರ ಸಂಜೆ ಚಂದ್ರದರ್ಶನ ಆದ ಹಿನ್ನೆಲೆಯಲ್ಲಿ ಶನಿವಾರ ಈದ್ ಉಲ್ ಫಿತ್ರ ಹಬ್ಬವನ್ನು ಹೊಸಬಟ್ಟೆಗಳನ್ನು ಧರಿಸಿ, ಪ್ರಾರ್ಥನೆ ಸಲ್ಲಿಸಿ, ಪರಸ್ಪರ ಶುಭಾಶಯ ವಿನಿಮಯ ಮಾಡಿ ಕೊಳ್ಳುವ ಮೂಲಕ ಆಚರಿಸಿದರು.

ಬೆಳಿಗ್ಗೆ ಇಲ್ಲಿನ ಜಾಮೀಯಾ ಮಸೀದಿಯಿಂದ ಪಾದಯಾತ್ರೆ ಮೂಲಕ ಈದ್ಗಾ ಮೈದಾನಕ್ಕೆ ತೆರಳಿದ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ, ನಂತರ ಪರಸ್ಪರ ಶುಭಾಷಯ ವಿನಿಮಯ ಮಾಡಿಕೊಂಡರು.

ಸಂಜೆ ಕಾಂಗ್ರೆಸ್ ಅಭ್ಯರ್ಥಿ ನಂದಿಗಾವಿ ಶ್ರೀನಿವಾಸ್, ಜೆಡಿಎಸ್ ಅಭ್ಯರ್ಥಿ ಹೆಚ್.ಎಸ್. ಶಿವಶಂಕರ್ ಅವರು ಪಟ್ಟಣಕ್ಕೆ ಭೇಟಿ ನೀಡಿ ಮುಸ್ಲಿಂ ಬಾಂಧವರಿಗೆ ಶುಭಾಶಯ ಸಲ್ಲಿಸಿದರು.

ಭದ್ರತೆಗೆ ಸ್ಥಳೀಯ ಪೊಲೀಸರ ಜೊತೆಗೆ ಈ ಬಾರಿ ಸಿಐಎಸ್‌ಎಫ್ ಯೋ ಧ ರ ನ್ನೂ ನಿಯೋಜಿಸಲಾಗಿತ್ತು. ಪಿಎಸ್‌ಐ ಪ್ರಭು ಕೆಳಗಿನಮನಿ ಭದ್ರತೆಯ ನೇತೃತ್ವ ವಹಿಸಿದ್ದರು.

## ನಗರದಲ್ಲಿ ಇಂದು ಸಿದ್ದಗಂಗಾ ಗೆಳೆಯರ ಬಳಗದಿಂದ ಬಸವ ಜಯಂತಿ


ಸಿದ್ದಗಂಗಾ ಗೆಳೆಯರ ಬಳಗದ ವತಿಯಿಂದ ವಿನೋಬ ನಗರ, 3 ನೇ ಮುಖ್ಯ ರಸ್ತೆ , 1 ನೇ ಅಡ್ಡ ರಸ್ತೆಯ ವಿಶ್ವ ಗುರು ಬಸವೇಶ್ವರ ವೃತ್ತದಲ್ಲಿ ಇಂದು ಸಂಜೆ 6 ಗಂಟೆಗೆ ಬಸವ ಜಯಂತಿಯನ್ನು ಆಚರಿಸಲಾಗುವುದು. ಶ್ರೀಶೈಲ ಮಠದ ಸಂಸ್ಕೃತ ಪಾಠ ಶಾಲೆಯ ಮಕ್ಕಳಿಂದ ವಚನಾಭಿಷೇಕದೊಂದಿಗೆ ಕಾರ್ಯಕ್ರಮವನ್ನು ಆಚರಿಸಲಾಗುವುದು ಎಂದು ಸಿದ್ಧಗಂಗಾ ಗೆಳೆಯರ ಬಳಗದ ಸಂಘಟನಾ ಕಾರ್ಯದರ್ಶಿ ಕೇಶವ್ ಶೇಟ್ ತಿಳಿಸಿದ್ದಾರೆ.

## ಮಲೇಬೆನ್ನೂರು : ಇಂದು ರಂಭಾಪುರಿ ಶ್ರೀಗಳಿಂದ ಇಷ್ಟಲಿಂಗ ಪೂಜೆ



ಮಲೇಬೆನ್ನೂರು : ಪಟ್ಟಣದ ಹೊರ ವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದ 3ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 10 ಗಂಟೆಗೆ ಶ್ರೀಮದ್ ರಂಭಾಪುರಿ ಜಗದ್ಗುರುಗಳವರಿಂದ ಇಷ್ಟಲಿಂಗ ಮಹಾಪೂಜೆ ಯನ್ನು ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಉಪಾಧ್ಯಕ್ಷ ಬಿ.ಚಿದಾನಂದಪ್ಪ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಸಿದ್ಧ ಕಣ್ಣಿನ ಹನಿ



ವಿದ್ಯಾ ನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 12 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ. ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು.

ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676-91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಅವರನ್ನು ಸಂಪರ್ಕಿಸಬಹುದು.

## ಮಲೇಬೆನ್ನೂರಿನಲ್ಲಿ ಇಂದು ತೇರು, ಸಾಮೂಹಿಕ ವಿವಾಹ

ನಂದಿಗುಡಿ ರಸ್ತೆಯಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಟ್ರಸ್ಟ್ ಕಮಿಟಿ ವತಿಯಿಂದ ಶ್ರೀ ಆಂಜನೇಯ ಸ್ವಾಮಿ ರಥೋತ್ಸವದ ಪ್ರಯುಕ್ತ ಇಂದು ಬೆಳಿಗ್ಗೆ 8 ಕ್ಕೆ ಹೂವಿನ ತೇರು ಮತ್ತು 10.30 ಕ್ಕೆ ಬಸವ ಜಯಂತಿ ಅಂಗವಾಗಿ ಸಾಮೂಹಿಕ ವಿವಾಹಗಳನ್ನು ಏರ್ಪಡಿಸಲಾಗಿದೆ. ಸಾನ್ನಿಧ್ಯ : ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಶ್ರೀ ಕೃಷ್ಣಾನಂದ ತೀರ್ಥ ಸ್ವಾಮೀಜಿ, ಶ್ರೀ ಸದ್ಗುರು ಮುರಳೀಧರ ಸ್ವಾಮೀಜಿ.

## ಇಂದು 'ನಮ್ಮ ಸಿನಿಮಾ' ಪ್ರಾರಂಭೋತ್ಸವ

ದಾವಣಗೆರೆ, ಏ. 22- ನಗರದ ನಗರದಲ್ಲಿ 'ನಮ್ಮ ಸಿನಿಮಾ' ಚಿತ್ರಮಂದಿರ ನಾಳೆ ದಿನಾಂಕ 23 ರ ಭಾನುವಾರ ಬೆಳಿಗ್ಗೆ 10.30 ಕ್ಕೆ ಉದ್ಘಾಟನೆಗೊಳ್ಳಲಿದೆ ಎಂದು ಮುಖ್ಯಸ್ಥರಾದ ಪ್ರವೀಣ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಪ್ರಾರಂಭದ ಆಕರ್ಷಣೆಯಾಗಿ 'ಗೋರೋ ಚೋರಿ' ಬಂಜಾರ ಸಮುದಾಯದ ಆಲ್ಬಂ ಪ್ರದರ್ಶನಗೊಳ್ಳಲಿದ್ದು, ನಾಡಿದ್ದು ದಿನಾಂಕ 24 ರ ಸೋಮವಾರ ಡಾ. ರಾಜ್ ಕುಮಾರ್ ಅವರಜನ್ಮ ದಿನವನ್ನು ರಾಜ್ ಅಭಿಮಾನಿಗಳ ಸಹಯೋಗದಲ್ಲಿ ಆಚರಿಸಲಾಗುವುದು ಎಂದರು.

## 5,300 ಕಿ.ಮೀ. ಪ್ರಯಾಣ

(1ನೇ ಪುಟದಿಂದ) ಕೊಚ್ಚಿಗೆ ತೆರಳಲಿದ್ದಾರೆ. ಅಲ್ಲಿ ಯುವಂ ಕಾನ್‌ಕ್ಲೇವ್ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಮರು ದಿನ ಮಂಗಳವಾರ ಕೊಚ್ಚಿಯಿಂದ ತಿರುವನಂತಪುರಂಗೆ ತೆರಳಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಹಸಿರು ನಿಶಾನೆ ತೆರಲಿದ್ದಾರೆ. ನಂತರ ಸೂರತ್ ಮೂಲಕ ಸಿಲ್ವಾಸಾಗೆ ತೆರಳಲಿದ್ದಾರೆ. ಅಲ್ಲಿ ನಮೋ ವೈದ್ಯಕೀಯ ಕಾಲೇಜಿಗೆ ಭೇಟಿ ನೀಡಿ ಹಲವಾರು ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಲಿದ್ದಾರೆ.

ಅಲ್ಲಿಂದ ದಮನ್‌ನಲ್ಲಿರುವ ದೇವಕ ಕಡಲ ತೀರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಸೂರತ್ ಮೂಲಕ ದೆಹಲಿಗೆ ಮರಳಲಿದ್ದಾರೆ. ಒಟ್ಟಾರೆ 36 ಗಂಟೆಗಳಲ್ಲಿ ಪ್ರಧಾನಿ 5,300 ಕಿಮೀ ಪ್ರಯಾಣ ಮಾಡಲಿದ್ದಾರೆ. ದೇಶದ ಉತ್ತರದಿಂದ ದಕ್ಷಿಣದ ನಡುವಿನ ಅಂತರವೇ 3,200 ಕಿ.ಮೀ. ಆಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಎಸ್‌ಯುಜೆಎಂ ಕಾಲೇಜಿನ ಮಲ್ಲಮ್ಮ ರಾಜ್ಯಕ್ಕೆ ದ್ವಿತೀಯ



**ಹರಪನಹಳ್ಳಿ**

ಹರಪನಹಳ್ಳಿ, ಏ.22 - ಪಟ್ಟಣದ ಎಸ್‌ಯುಜೆಎಂ ಕಾಲೇಜಿನ ಪಿಯು ವಿದ್ಯಾರ್ಥಿನಿ ಮುತ್ತೂರು ಮಲ್ಲಮ್ಮ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಗಳಿಸಿದ್ದಾರೆ.

ದ್ವಿತೀಯ ಪಿಯು ಪರೀಕ್ಷಾ ಫಲಿತಾಂಶದಲ್ಲಿ ಮುತ್ತೂರು ಮಲ್ಲಮ್ಮ 600 ಅಂಕಗಳಿಗೆ 592 ಅಂಕ ಗಳಿಸಿ ರಾಜ್ಯದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾಳೆ. ಬಿ.ಎ. ಓದಿ ಕೆ.ಎ.ಎಸ್. ಪಾಸ್ ಮಾಡಿ ತಹಶೀಲ್ದಾರ್ ಆಗುವ ಆಸೆ ವ್ಯಕ್ತಪಡಿಸಿದ ಮುತ್ತೂರು ಮಲ್ಲಮ್ಮ ಸಿಹಿ ಹಂಚಿ ಹರ್ಷ ವ್ಯಕ್ತಪಡಿಸಿದರು.

ಮಲ್ಲಮ್ಮ ನ ಪೋಷಕರು ಕೂಲಿ ಕೆಲಸ ಮಾಡಿ ಮಗಳನ್ನು ಓದಿಸುತ್ತಿದ್ದಾರೆ. ಹಗರಿಬೊಮ್ಮನಹಳ್ಳಿ ತಾಲೂಕಿನ ಕನ್ನಿಹಳ್ಳಿ ಗ್ರಾಮದ ನಿವಾಸಿಯಾದ ಎಂ.ದುರುಗಪ್ಪ, ಸಾವಿತ್ರಮ್ಮ ದಂಪತಿ ಪುತ್ರಿ.

ಕಲಾ ವಿಭಾಗದಲ್ಲಿ ರಾಜ್ಯಕ್ಕೆ 2ನೇ ರ್‍ಯಾಂಕ್ ಬಂದ ಕೂಲಿ ಕಾರ್ಮಿಕನ ಮಗಳು. ಹರಪನಹಳ್ಳಿಯ ಶ್ರೀ ಉಜ್ಜಯಿನಿ ಜಗದ್ಗುರು ಮರುಳಾರಾಧ್ಯ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ. ಕನ್ನಡ 100, ಸಂಸ್ಕೃತ 100, ಐಚ್ಛಿಕ ಕನ್ನಡ 97, ಇತಿಹಾಸ 97, ರಾಜ್ಯಶಾಸ್ತ್ರ 98, ಶಿಕ್ಷಣ ಶಾಸ್ತ್ರ 100 ಅಂಕಗಳನ್ನು ಪಡೆದಿದ್ದಾರೆ

ಪ್ರತಿದಿನ ಕನ್ನಿಹಳ್ಳಿಯಿಂದ ನಾಲ್ಕು ಕೀ.ಮೀ ನಡೆದುಕೊಂಡು ಇಟಿಗಿ ಹೋಬಳಿಗೆ ಬಂದು ಅಲ್ಲಿಂದ ಬಸ್‌ನಲ್ಲಿ ಪ್ರಯಾಣ ಮಾಡಿ ಪಟ್ಟಣದ ಪದವಿ ಪೂರ್ವ ಕಾಲೇಜಿಗೆ ಬಂದು ಶಿಕ್ಷಣ ಪಡೆಯುತಿದ್ದೆ. ಎಸ್.ಕೊಟ್ರೇಶ್ ಶಿಕ್ಷಣ ಶಾಸ್ತ್ರ ಉಪನ್ಯಾಸಕರು ರ್‍ಯಾಂಕ್ ಬರಲು ನನಗೆ ಪ್ರೇರಣೆ ನೀಡಿದರು. ತಂದೆ ತಾಯಿ ಕೃಷಿಯಲ್ಲಿ ಕೂಲಿ ಮಾಡಿ ನನಗೆ ರ್‍ಯಾಂಕ್ ಬರಲು ಸಹಕಾರ ನೀಡಿದರು ಎಂದು ತಿಳಿಸಿದರು.

ಉಜ್ಜಯಿನಿ ಸದ್ಧರ್ಮ ಪೀಠದ ಜಗದ್ಗುರು ಶ್ರೀ ಸಿದ್ದಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಭಗವತ್ಪಾದರು, ಆಡಳಿತ ಮಂಡಳಿಯವರು ಮತ್ತು ಕಾರ್ಯದರ್ಶಿ ಎಂ.ಎಂ.ಜೆ.ಹರ್ಷವರ್ಧನ, ಪ್ರಾಚಾರ್ಯರು, ಶ್ರೀ ಉಜ್ಜಯಿನಿ ಜಗದ್ಗುರು ಮರುಳಾರಾಧ್ಯ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು, ಹಾಗೂ ಸಿಬ್ಬಂದಿಯವರು ವಿದ್ಯಾರ್ಥಿನಿ ಮುತ್ತೂರು ಮಲ್ಲಮ್ಮರನ್ನು ಸನ್ಮಾನಿಸಿ, ಅಭಿನಂದಿಸಿದರು.

# ಗೌರಿಪುರ ಹೊಸೂರುದಲ್ಲಿ ಮತದಾನ ಬಹಿಷ್ಕಾರ

ಜಗಳೂರು, ಏ. 22- ತಾಲ್ಲೂಕಿನ ಕ್ಯಾಸೇನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಗೌರಿಪುರ ಹೊಸೂರು ಗ್ರಾಮದ ನಿವಾಸಿಗಳು ಮತದಾನ ಬಹಿಷ್ಕಾರ ಮಾಡಲಾಗುವುದು ಎಂದು ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದ್ದಾರೆ.

ಗ್ರಾಮದ ಯುವ ಮುಖಂಡ ಹಾಗೂ ವಕೀಲ ಮೈಲೇಶ್ ಮಾತನಾಡಿ, ಈ ಗ್ರಾಮದಲ್ಲಿ 300ಕ್ಕೂ ಅಧಿಕ ಮತ ಗಳನ್ನು ಹೊಂದಿದ್ದು, 100ಕ್ಕೂ ಹೆಚ್ಚು ಮನೆಗಳಿವೆ. ಈ ಪ್ರದೇಶದಲ್ಲಿ ಬಡ ಹಾಗೂ ಕೂಲಿ ಕಾರ್ಮಿಕರೇ ಹೆಚ್ಚಾಗಿ ಜೀವನ ನಡೆಸುತ್ತಿದ್ದಾರೆ.

2002-03ನೇ ಸಾಲಿನಲ್ಲಿ ಸರ್ಕಾರ ದಿಂದ 75 ಫಲಾನುಭವಿಗಳಿಗೆ ಗುಂಪು ಆಶ್ರಯ ಮನೆ ಯೋಜನೆ ಯಡಿ ಮನೆ



**ಜಗಳೂರು**

ನೀಡಲಾಗಿತ್ತು.ಇದರ ಸುತ್ತ ಇದ್ದ ಖಾಲಿ ಜಾಗದಲ್ಲಿ ಮ ನೆ ಗ ಳ ನ್ನು ನಿರ್ಮಿಸಿಕೊಂಡಿ ದ್ದಾರೆ. ಇವರಿಗೆ ಹಕ್ಕು ಪತ್ರ ನೀಡುವಂತೆ ಗ್ರಾಮ ಪಂಚಾಯಿತಿ, ಹಾಗೂ ತಾಲ್ಲೂಕು ಕಚೇರಿ ಸೇರಿದಂತೆ, ಜನ ಪ್ರತಿನಿಧಿಗಳ ಹತ್ತಿರ ಹಲವಾರು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಅದ್ದರಿಂದ ಈ ಬಾರಿಯ ವಿಧಾನ ಸಭೆ ಚುನಾವಣೆಯಲ್ಲಿ ಮತ ದಾನ ಮಾಡದೇ ಬಹಿಷ್ಕಾರ ಮಾಡಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ದಲಿತ ಮುಖಂಡ ಸತ್ಯಮೂರ್ತಿ ಮಾತನಾಡಿ, ಇಲ್ಲಿ ವಾಸ ಮಾಡುವ ಜನರು ಮನೆ ಇಲ್ಲದವರು ಹಾಗೂ ನಿರ್ಗತಿಕರು, ಕೂಲಿ ಕೆಲಸ ಮಾಡಿ ಜೀವನ ನಡೆಸುವಂತಹ ಕುಟುಂಬಗಳು ಹೆಚ್ಚಾಗಿವೆ.

ಈ ಸಂದರ್ಭದಲ್ಲಿ, ತಿಪ್ಪೇಶ್, ಸತೀಶ್, ಹನುಮಂತ್ ರಾಜ್, ನರೇಶ, ನಿರಂಜನ, ಪ್ರಕಾಶ್, ಶ್ರೀಧರ ನಾಗರಾಜ್, ಹನುಮಂತಪ್ಪ, ಪಾಪಮ್ಮ, ಪಾಲಮ್ಮ, ಬಸವರಾಜಪ್ಪ, ಅಜ್ಜಯ್ಯ, ಗಂಗಮ್ಮ ಸೇರಿದಂತೆ ಗೌರಿಪುರ ಹೊಸೂರಿನ ಮುಖಂಡರು ಇದ್ದರು.

## ಮಾಯಕೊಂಡದ ಕಾಂಗ್ರೆಸ್ ಅಭ್ಯರ್ಥಿ ಬಸವಂತಪ್ಪ ಅವರಿಂದ ಇಂದು ಪ್ರಚಾರ



ಮಾಯಕೊಂಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಎಸ್. ಬಸವಂತಪ್ಪ ಅವರು ಇಂದು ಬೆಳಿಗ್ಗೆ 8ಗಂಟೆಗೆ ಬಸವನಾಳ್ ಗೊಲ್ಲರಹಟ್ಟಿ, 8.30ಕ್ಕೆ ಬಸವನಾಳ್, ಮಧ್ಯಾಹ್ನ 12.30ಕ್ಕೆ ಶ್ರೀರಾಮನಗರ (ಆಲೂರುಹಟ್ಟಿ), 1ಕ್ಕೆ ಮೆಳ್ಳೆಕಟ್ಟೆ, 3.30ಕ್ಕೆ ಗಿರಿಯಾಪುರ, 4.30ಕ್ಕೆ ಗೊಲ್ಲರಹಳ್ಳಿ, ಸಂಜೆ 5.30ಕ್ಕೆ ಕಿತ್ತೂರು, 6.30ಕ್ಕೆ ಹುಲಿಕಟ್ಟೆ, 7.30ಕ್ಕೆ ಕೆರೆಯಾಗಳ ಹಳ್ಳಿ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಪ್ರಚಾರ ನಡೆಸುವರು ಎಂದು ಬಸವಾಪಟ್ಟಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಟಿ. ಹನುಮಂತಪ್ಪ ತಿಳಿಸಿದ್ದಾರೆ.

## ಹೊಳೆಸಿರಿಗೆರೆ ಕಾಲೇಜಿಗೆ ಶೇ.76 ಫಲಿತಾಂಶ





ಮಲೇಬೆನ್ನೂರು, ಏ.22- ಹೊಳೆಸಿರಿಗೆರೆ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.76 ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆಗೆ ಹಾಜರಾಗಿದ್ದ 50 ವಿದ್ಯಾರ್ಥಿಗಳ ಪೈಕಿ 38 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಇದರಲ್ಲಿ ವಿಜ್ಞಾನ ವಿಭಾಗಕ್ಕೆ ಶೇ.80.76 ಮತ್ತು ಕಲಾ ವಿಭಾಗಕ್ಕೆ ಶೇ.70.83ರಷ್ಟು ಫಲಿತಾಂಶ ಲಭಿಸಿದೆ.

ವಿಜ್ಞಾನ ವಿಭಾಗಕ್ಕೆ ಜಿ.ಎನ್.ಚಂದನಾ 600ಕ್ಕೆ 524 ಮತ್ತು ಕಲಾ ವಿಭಾಗದಲ್ಲಿ ಕೆ.ಪಿ.ಸೋಮಲಿಂಗ 600ಕ್ಕೆ 515 ಅಂಕ ಪಡೆದಿದ್ದಾರೆ.

## ರಾಣೇಬೆನ್ನೂರು : ಇಂದು ಬಸವ ಜಯಂತಿ

ವಿಶ್ವಧರ್ಮ ಪ್ರವಚನ ಸಮಿತಿ ಇವರ ಆಶ್ರಯದಲ್ಲಿ ಇಂದು ಸಂಜೆ ಕುಂದಾಪೂರ ಸಭಾಭವನದಲ್ಲಿ ರತ್ನಾಕರ ಕುಂದಾಪೂರ ಅಧ್ಯಕ್ಷತೆಯಲ್ಲಿ ಬಸವ ಜಯಂತಿ ಕಾರ್ಯಕ್ರಮ ನಡೆಯಲಿದೆ. ಗಂಡಿಗೆವಾಡ ಹಿರೇಮಠದ ಶ್ರೀ ಮೃತ್ಯುಂಜಯ ಸ್ವಾಮಿಗಳು ಅನುಭಾವದ ನುಡಿಗಳನ್ನಾಡಲಿದ್ದಾರೆ.

ಎಂ.ಜಿ. ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಸುವರ್ಣಾದೇವಿ ಪಾಟೀಲ, ಎಂ.ಎಸ್. ಅರಕೇರಿ, ವಾಸು ಗುಪ್ತಾ, ವಾಸು ಲದ್ವಾ, ವಿ.ಪಿ.ಲಿಂಗನಗೌಡ, ಕಿರಣ ಮಾಂಡ್ರೆ, ಸುರೇಶ ಮಾಕನೂರ, ವಚನಶ್ರೀ ಪಾಟೀಲ, ಅಂದಾನೆಪ್ಪ ಅಸುಂಡಿ ಉಪಸ್ಥಿತರಿರುವರು.

## ದೊಡ್ಡಪೇಟೆಯಲ್ಲಿ ಇಂದು ಬಸವ ಜಯಂತಿ

ಶ್ರೀ ಜಗಜ್ಯೋತಿ ಬಸವೇಶ್ವರರ 112ನೇ ವರ್ಷದ ಜಯಂತ್ಯೋತ್ಸವವು ದಾವಣಗೆರೆ ದೊಡ್ಡಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಇಂದು ನಡೆಯಲಿದೆ. ಇಂದು ಬೆಳಿಗ್ಗೆ 9 ಗಂಟೆಗೆ ಮಹಿಳೆಯರಿಂದ ತೊಟ್ಟಿಲು ಪೂಜಾ ಕಾರ್ಯಕ್ರಮ, ಸಂಜೆ 6 ಗಂಟೆಗೆ ಹೂವಿನ ಅಲಂಕಾರ ಅಡ್ಡ ಪಲ್ಲಕ್ಕಿಯಲ್ಲಿ ಶ್ರೀ ಬಸವೇಶ್ವರರ ಬೆಳ್ಳಿ ಪುತ್ಥಳಿಯ ಭವ್ಯ ಮೆರವಣಿಗೆ ಏರ್ಪಾಡಾಗಿದೆ.

ನಾಳೆ ಸೋಮವಾರ ಮಧ್ಯಾಹ್ನ 12.30ಕ್ಕೆ ಸಾರ್ವಜನಿಕರಿಗೆ ಮಹಾದಾಸೋಹ ಆಯೋಜನೆಗೊಂಡಿದೆ. ದೊಡ್ಡಪೇಟೆ ಶ್ರೀ ಬಸವೇಶ್ವರ ಸೇವಾ ಸಂಘದ ಅಧ್ಯಕ್ಷರೂ ಆಗಿರುವ ಕೈಗಾರಿಕೋದ್ಯಮಿ ಅಥಣಿ ಎಸ್. ವೀರಣ್ಣ ಮತ್ತು ಸಹೋದರರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

## ಇಂದು ಬಸವ ಜಯಂತಿ ಕವಿಗೋಷ್ಠಿ

ಶ್ರೀ ಬಸವ ಜಯಂತಿ ಮತ್ತು ಶ್ರೀ ಶಿವಕುಮಾರ ಸ್ವಾಮೀಜಿಯವರ 116ನೇ ಜನ್ಮ ದಿನೋತ್ಸವ ಮತ್ತು ಕವಿಗೋಷ್ಠಿ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10-30 ಕ್ಕೆ ದಾವಣಗೆರೆಯ ನಿರ್ವಾಣ ಆರ್ಟ್ ಗ್ಯಾಲರಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ವಚನ ಸಾಹಿತ್ಯ ಪರಿಷತ್ ಮತ್ತು ಕನ್ನಡ ಚುಟುಕು ಸಾಹಿತ್ಯ ಪರಿಷತ್ ಮತ್ತಿತರೆ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿ.ಹೆಚ್.ರಾಜಶೇಖರ್ ಗುಂಡಗಟ್ಟಿ ವಹಿಸುವರು. ಎಸ್.ಮಲ್ಲಿಕಾರ್ಜುನ ಕಾರ್ಯಕ್ರಮವನ್ನು ಉದ್ಘಾಟಿಸುವರು.

ಕೆ.ಬಿ.ಕೊಟ್ರೇಶ್, ಎಂ.ಬಸವರಾಜ, ಶ್ರೀಮತಿ ನೀಲಗುಂದ ಜಯಮ್ಮ, ರವಿಕುಮಾರ್ ಉಪಸ್ಥಿತರಿರುವರು. 'ಶ್ರೀ ಬಸವಣ್ಣನವರ ನಡೆ ನುಡಿ ಕಾಯಕ ಸೇವೆ' ಕುರಿತು ನಾ.ಕೊಟ್ರೇಶ್ ಉತ್ತಂಗಿ ಮತ್ತು'ನಡೆದಾಡುವ ದೇವರು ಶ್ರೀ ಶಿವಕುಮಾರ ಸ್ವಾಮೀಜಿಯವರ ಕಾಯಕಲ್ಪ' ವಿಷಯ ಕುರಿತಂತೆ ಶ್ರೀಮತಿ ಶಕುಂತಲಮ್ಮ ಗುರುಸಿದ್ಧಸ್ವಾಮಿ ಉಪನ್ಯಾಸ ನೀಡಲಿದ್ದಾರೆ. ಪ್ರಕಾಶ್ ಬೂಸನೂರ್ ಕವಿಗೋಷ್ಠಿ ಉದ್ಘಾಟಿಸುವರು.

## ಅನ್ನಪೂರ್ಣಮ್ಮ ನಿಧನ



ದಾವಣಗೆರೆ 1ನೇ ವಾರ್ಡ್ ದೊಡ್ಡಬೂದಿಹಾಳ್ ಗ್ರಾಮದ ವಾಸಿ ಅನ್ನಪೂರ್ಣಮ್ಮ (78) ಇವರು ದಿನಾಂಕ 22.04.2023ರ ಶನಿವಾರ ರಾತ್ರಿ 8.30 ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.04.2023ರ ಭಾನುವಾರ ಮಧ್ಯಾಹ್ನ 12 ಕ್ಕೆ ದೊಡ್ಡಬೂದಿಹಾಳ್ ರುದ್ರಭೂಮಿಯಲ್ಲಿ ನೆರವೇರಲಿದೆ.

# ಎರಡು-ಮೂರನೇ ಹಂತದಲ್ಲಿರುವ ಕ್ಷೇತ್ರಗಳ ಮೇಲೆ ನಾಯಕರ ಕಣ್ಣು

**(1ನೇ ಪುಟದಿಂದ)** ಪ್ರತಿನಿಧಿಸುವ ಚಿತ್ತಾಪುರದಲ್ಲೂ ಪ್ರಧಾನಿಯವರು ರೋಡ್ ಶೋ ನಡೆಸಲು ನಿನ್ನೆ ರಾತ್ರಿ ನಡೆದ ಸಭೆ ತೀರ್ಮಾನಿಸಿದೆ. ಬಿಜೆಪಿ ಪ್ರಭಾವವಿರುವ ಕ್ಷೇತ್ರಗಳಲ್ಲಿ ಮೋದಿ ಪ್ರವಾಸ ತುಂಬಾ ಕಡಿಮೆ. ಆದರೆ ವಿಧಾನಸಭಾ ಚುನಾವಣಾ ಪೂರ್ವ ಸಮೀಕ್ಷಾ ವರದಿಗಳ ಆಧಾರದ ಮೇಲೆ ಎರಡನೇ ಮತ್ತು ಮೂರನೇ ಸ್ಥಾನದಲ್ಲಿರುವ ಪಕ್ಷದ ಅಭ್ಯರ್ಥಿಗಳ ಈ ಕ್ಷೇತ್ರಗಳನ್ನು ಬಿ ಮತ್ತು ಸಿ ಎಂದು ವರ್ಗೀಕರಿಸಲಾಗಿದೆ.

ಇಂತಹ ವಿಧಾನಸಭಾ ಕ್ಷೇತ್ರಗಳಲ್ಲಿ ಮೋದಿ ಅವರು ರೋಡ್ ಶೋ ಮತ್ತು ಪ್ರಚಾರವನ್ನು ನಡೆಸಲಿದ್ದಾರೆ.

ಇದೇ 27ರಂದು ಆನ್‌ಲೈನ್ ಮೂಲಕ 44 ಸಾವಿರ ಬೂತ್ ಹಾಗೂ ಏಕಕಾಲದಲ್ಲಿ 50 ಲಕ್ಷ ಮತದಾರರನ್ನು ತಲುಪುವಂತೆ ಪ್ರಚಾರಕ್ಕೆ ಚಾಲನೆ ಕೊಡಲಿರುವ ಮೋದಿ ಅವರು, ಮರುದಿನವೇ ಕರ್ನಾಟಕಕ್ಕೆ ದಾಂಗುಡಿ ಇಡಲಿದ್ದಾರೆ.

ಆನ್‌ಲೈನ್ ಮೂಲಕ ನಡೆಸಲಿರುವ ಪ್ರಚಾರ ಅಂದಾಜು ಒಂದು ಕೋಟಿಗೂ ಅಧಿಕ ಮತದಾರರನ್ನು ತಲುಪುವಂತೆ ವ್ಯವಸ್ಥೆ ಕಲ್ಪಿಸಲಾಗಿದ್ದು, ಇದಕ್ಕಾಗಿ ಬೂತ್ ಮಟ್ಟದಲ್ಲಿ ಬೃಹದಾಕಾರದ ಎಲ್‌ಇಡಿಗಳನ್ನು ಅಳವಡಿಸಲಾಗಿದೆ. ಪಕ್ಷದ ಕಾರ್ಯಕರ್ತರು ಕುಳಿತು, ಇಲ್ಲವೇ ನಿಂತು ಮೋದಿ ಅವರ ಭಾಷಣವನ್ನು ಆಲಿಸುವಂತೆ ವಿಶೇಷ ವ್ಯವಸ್ಥೆಯನ್ನು ಬಿಜೆಪಿ ಕಲ್ಪಿಸಿದೆ.

ಮೇ 28ರಂದು ಕೋಲಾರ ನಗರದ ಹೊರವಲಯದಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಅವಳಿ ಜಿಲ್ಲೆಯ ಬಿಜೆಪಿ ಅಭ್ಯರ್ಥಿ ಪರವಾಗಿ ಪ್ರಚಾರ ನಡೆಸಲಿದ್ದಾರೆ. ಇದಕ್ಕಾಗಿ ಸುಮಾರು 30 ಎಕರೆಯಲ್ಲಿ ಸಮಾವೇಶವನ್ನು ನಡೆಸಲು ತೀರ್ಮಾನಿಸಲಾಗಿದೆ. ಕೋಲಾರದ ನಂತರ ರಾಮನಗರ ಜಿಲ್ಲೆ ಚನ್ನಪಟ್ಟಣದಲ್ಲಿ ಬಿಜೆಪಿ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಪರವಾಗಿ ಅಬ್ಬರದ ಪ್ರಚಾರ ನಡೆಸಲಿದ್ದಾರೆ.

ಮಾಗಡಿ, ರಾಮನಗರ ಮತ್ತು ಕನಕಪುರದ ಜೊತೆಗೆ ಮಂಡ್ಯ ಜಿಲ್ಲೆಯನ್ನು ಗುರಿಯಾಗಿಟ್ಟುಕೊಂಡು ಮೋದಿ ರಣಕಹಳೆ ಮೊಳಗಿಸಲಿದ್ದಾರೆ. ನಂತರ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯಲ್ಲಿ ಪ್ರಚಾರ ನಡೆಸಲಿರುವ ಮೋದಿ ಅವರು ಮೇ 6ರಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತವರು ಜಿಲ್ಲೆ ಕಲಬುರಗಿಯಲ್ಲಿ ರೋಡ್ ಶೋ ನಡೆಸುವರು.

ಬಳಿಕ ಪ್ರಿಯಾಂಕ ಖರ್ಗೆ ಪ್ರತಿನಿಧಿಸುವ ಚಿತ್ತಾಪುರದಲ್ಲಿ ಬಹಿರಂಗ ಸಭೆ ನಡೆಸಿ ಬಿಜೆಪಿ ಅಭ್ಯರ್ಥಿ ಪರವಾಗಿ ಮತಯಾಚನೆ ಮಾಡಲಿದ್ದಾರೆ. ಕಲ್ಯಾಣ ಕರ್ನಾಟಕದ ಬಳ್ಳಾರಿ, ಕೊಪ್ಪಳ, ರಾಯಚೂರು, ಬೀದರ್ ಜಿಲ್ಲೆಗಳಲ್ಲಿ ಅಂದಾಜು 6 ರಿಂದ 8 ಸಮಾವೇಶಗಳನ್ನು ನಡೆಸಲು ಉದ್ದೇಶಿಸಲಾಗಿದೆ.

ರಾಜಧಾನಿ ಬೆಂಗಳೂರಿನ ನಂತರ ಅತಿ ಹೆಚ್ಚು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಬೆಳಗಾವಿಯಲ್ಲಿ ರೋಡ್ ಶೋ ಮತ್ತು ಸಾರ್ವಜನಿಕ ಸಭೆ ನಡೆಸುವ ಮೋದಿಯವರು ಹುಬ್ಬಳ್ಳಿಯಲ್ಲಿ ಬೃಹತ್ ರೋಡ್ ಶೋ ಮತ್ತು ಸಾರ್ವಜನಿಕ ರ್‍ಯಾಲಿಯನ್ನು ನಡೆಸಲಿದ್ದಾರೆ.

ಅಂದಾಜು 20ಕ್ಕೂ ಹೆಚ್ಚು ಸಾರ್ವಜನಿಕ ಸಭೆಗಳು ಇತರ ಕಡೆ ರೋಡ್ ಶೋ ನಡೆಸಿ ಮೇ 8ರವರೆಗೂ ಮೋದಿಯವರು ರಾಜ್ಯದಲ್ಲಿ ಪ್ರಚಾರವನ್ನು ನಡೆಸಲಿದ್ದಾರೆ ಎಂದು ತಿಳಿದುಬಂದಿದೆ.

# ವಾರ ಭವಿಷ್ಯ

**ದಿನಾಂಕ : 23.04.2023 ರಿಂದ 29.04.2023**
**– ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**
ಸ್ನೇಹಿತರು ಮಾಡುವ ಉಪಕಾರವನ್ನು ಯಾವಾಗಲೂ ಮರೆಯದಿರಿ. ಸಾಮಾಜಿಕ ಜೀವನದಲ್ಲಿ ತೊಡಗಿಕೊಂಡವರಿಗೆ ತಮ್ಮ ವೈಯಕ್ತಿಕ ಜೀವನದ ಕಡೆ ಲಕ್ಷ್ಯೆಯಿಡಲಾಗದೇ, ಮಾನಸಿಕ ನೆಮ್ಮದಿ ಕಳೆದುಕೊಳ್ಳುವರು. ಕೌಟುಂಬಿಕ ಕಟ್ಟುಪಾಡುಗಳು ಯುವಕರಿಗೆ ಇಷ್ಟವಾಗದೇ ಹೋಗಬಹುದು. ಬಂಧುಗಳಲ್ಲಿ ಕೆಲವರ ಬಳಿ ಹೆಚ್ಚಿನ ಅಂತರ ಕಾಪಾಡಿ ಕೊಳ್ಳುವುದು ಮೇಲು. ಹಿಂದೆ ಮಾಡಿದ ತಪ್ಪುಗಳು ವೃತ್ತಿಯಲ್ಲಿ ಮತ್ತೆ ಪುನರಾವರ್ತನೆ ಯಾಗದಂತೆ ಎಚ್ಚರ ವಹಿಸಿ. ತೀರ್ಥಯಾತ್ರೆಗೆ ಹೊರಟಿರುವ ಹಿರಿಯರಿಗೆ ಸ್ಥಳೀಯರಿಂದ ಎಲ್ಲಾ ರೀತಿಯ ಸಹಕಾರ ಸಿಗಲಿದೆ. ಭಾನು-ಮಂಗಳ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**
ನಿಮ್ಮಿಂದ ಮಾತ್ರ ಮಾಡಲು ಸಾಧ್ಯವಾದ ಕೆಲಸಗಳನ್ನು ಮತ್ತೊಬ್ಬರಿಗೆ ವಹಿಸುವುದರಿಂದ ವೃಥಾ ಕಾಲಹರಣವಾಗಬಹುದು. ವಿದ್ಯಾರ್ಥಿಗಳ ಉನ್ನತಾಧ್ಯಯನಕ್ಕೆ ಸಮಾಜದಿಂದ ಆರ್ಥಿಕ ನೆರವು ದೊರೆಯಲಿದೆ. ಮಗನ ಮದುವೆ ಪ್ರಸ್ತಾಪವು ಅನಿರೀಕ್ಷಿತವಾಗಿ ಮುಂದೆ ಹೋಗಲಿದೆ. ಆತ್ಮೀಯರಾಗಿದ್ದ ಬಂಧುವಿನ ಅಗಲಿಕೆ ನಿಮ್ಮನ್ನು ಮತ್ತೊಮ್ಮೆ ಕಾಡಲಿದೆ. ನಮ್ಮದಲ್ಲದ ವಸ್ತುವನ್ನು ಬಯಸಲು ಹೋಗಿ ನಿರಾಶರಾಗುವ ಪ್ರಸಂಗ ಬರಬಹುದು. ಆದಾಯಕ್ಕೆ ತಕ್ಕಂತೆ ವೆಚ್ಚವಿರುವುದು ಉತ್ತಮ, ಗುರುಗಳ ಸೇವೆ ಮಾಡಿ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಚ.ಕೆ.ಕೋ.ಹ.)**
ಗೊತ್ತಿರದ ವಿಷಯಗಳ ಬಗ್ಗೆ ಪಾಂಡಿತ್ಯ ತೋರಲು ಯತ್ನಿಸಿ, ನಗೆಪಾಟಲಿಗೀಡಾಗುವಿರಿ. ಜಗದ ಬದಲಾವಣೆಗೆ ಹಿರಿಯರಿಗೆ ಹೊಂದಿಕೊಂಡು ಹೋಗದೆ ವಿಧಿಯಿಲ್ಲ. ಸಾಂಸಾರಿಕ ಜಂಜಾಟದಿಂದ ದೂರವಿರಲು ಬಯಸುವಿರಿ. ಖಾಸಗಿ ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿರುವವರಿಗೆ ಜವಾಬ್ದಾರಿ ಹೆಚ್ಚಲಿದೆ. ಕೆಲವೊಮ್ಮೆ ನಿಮ್ಮ ಸಣ್ಣತನ ಬೇರೆಯವರಿಗೆ ಕಿರಿಕಿರಿಯನ್ನುಂಟು ಮಾಡಲಿದೆ. ಮಕ್ಕಳ ಉನ್ನತಾಧ್ಯಯನದ ಬಗ್ಗೆ ಒಂದು ನಿರ್ಧಾರಕ್ಕೆ ಬರುವುದು ಮೇಲು. ಕೊಡಿಟ್ಟ ಹಣದ ಬಗ್ಗೆ ಎಚ್ಚರವಿರಲಿ. ಭಾನು-ಬುಧ-ಶುಕ್ರ-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**
ಜೀವನದಲ್ಲಿ ಇಬ್ಬಗೆಯ ನೀತಿಯನ್ನು ಅನುಸರಿಸಿದಲ್ಲಿ ಹಲವಾರು ಗಂಡಾಂತರಗಳು ಎದುರಾಗಬಹುದು. ತೈಲ ವ್ಯಾಪಾರಿಗಳಿಗೆ ಮಾರುಕಟ್ಟೆಯಲ್ಲಿ ಹಲವಾರು ಸವಾಲುಗಳು ಎದುರಾಗಬಹುದು. ಚಿನ್ನದ ಧಾರಣೆಯ ಏರಿಳಿಕೆಯಿಂದಾಗಿ ಚಿನವಾರಪೇಟೆಯಲ್ಲಿ ಒಂದು ರೀತಿಯ ಪರಿಣಾಮ ಬೀರಲಿದೆ. ಪೂರ್ವ ಸಿದ್ಧತೆಯಿಲ್ಲದೆ ಪ್ರಯಾಣ ಮಾಡುವವರ ಬಗ್ಗೆ ಮನೆಯಲ್ಲಿ ಹಿರಿಯರಿಗೆ ಆತಂಕವನ್ನುಂಟು ಮಾಡಲಿದೆ. ವಿವಾಹದ ವಿಚಾರಗಳೆಲ್ಲವೂ ಅಡ್ಡಗೋಡೆ ಮೇಲೆ ದೀಪವಿಟ್ಟಂತಾಗಲಿದೆ, ಗಣೇಶನನ್ನು ದೂರ್ವೆಯಿಂದ ಆರಾಧಿಸಿ. ಸೋಮ-ಮಂಗಳ-ಶುಕ್ರ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**
ನೀವಾಡಬಹುದಾದ ಹರಿತವಾದ ಮಾತುಗಳು ಮತ್ತೊಬ್ಬರ ತೇಜೋವಧೆಗೆ ಕಾರಣವಾಗಬಹುದು, ಸಾಧ್ಯವಾದಷ್ಟು ಇದಕ್ಕೆ ಅವಕಾಶ ಮಾಡಿ ಕೊಡಬೇಡಿ. ಯಶಸ್ಸಿನ ಹಾದಿಯಲ್ಲಿ ಸಾಗುತ್ತಿರುವ ನೀವು, ಯಾವುದೇ ಕಾರಣಕ್ಕೂ ನಿಮ್ಮ ನಿರ್ಧಾರಗಳನ್ನು ಬದಲಿಸಬೇಡಿ. ವಿದೇಶದಲ್ಲಿ ಅಧ್ಯಯನ ಮಾಡುತ್ತಿರುವ ಮಗನ ಬಗ್ಗೆ ಚಿಂತೆಯಾಗಲಿದೆ. ವ್ಯವಹಾರದಲ್ಲಿ, ಪಾಲುದಾರರು ಕೊಡಬಹುದಾದ ಸಲಹೆಗಳು ಉಪಯುಕ್ತವಾಗಲಿವೆ.ಅಪರಿಚಿತ ಸ್ಥಳಗಳಲ್ಲಿ ಈಜಲು ಹೋಗುವುದು ಅಪಾಯಕರ. ಆರ್ಥಿಕ ಮುಗ್ಗಟ್ಟು ನಿಮ್ಮನ್ನು ಕಂಗಾಲಾಗಿಸಲಿದೆ. ಭಾನು-ಸೋಮ-ಬುಧ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**
ವಿಷಯಗಳನ್ನು ಸರಿಯಾಗಿ ಪರಾಮರ್ಶಿಸದೆ ನ್ಯಾಯ ನಿರ್ಣಯವನ್ನು ಕೊಡದಿರುವುದು ಉತ್ತಮ. ಪ್ರಾರ್ಥನೆಯಿಲ್ಲದೇ ಪ್ರಾರಂಭಿಸಿದ ಕೆಲಸಗಳಿಗೆ ವಿಘ್ನಗಳು ಹೆಚ್ಚಾಗಬಹುದು. ಯುವಕರು ಸರ್ಕಾರವು ಕೊಡಮಾಡುವ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳುವುದು ಉತ್ತಮ. ಮತ್ತೊಬ್ಬರ ವಾಹನಗಳನ್ನು ಚಾಲಿಸುವಾಗ ಸಾಕಷ್ಟು ಎಚ್ಚರದಿಂದಿರಿ. ಆರ್ಥಿಕ ಮುಗ್ಗಟ್ಟನ್ನು ಸರಿದೂಗಿಸಲು ಹರ ಸಾಹಸಪಡುವಿರಿ. ಮಹಿಳೆಯರು ತಮ್ಮ ಗೃಹಕೃತ್ಯಗಳನ್ನು ಮಾಡುವಾಗ ಸಾಕಷ್ಟು ಎಚ್ಚರದಿಂದಿರುವುದು ಉತ್ತಮ. ಗೋ ಸೇವೆ ಮಾಡಿ. ಮಂಗಳ-ಬುಧ-ಗುರು-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**
ರಾಜಕಾರಣಿಗಳು ಜನಸಾಮಾನ್ಯರಿಗೆ ಉಪಯೋಗವಾಗುವ ಕೆಲಸ ಕಾರ್ಯಗಳಿಗೆ ಅಡ್ಡಿಯನ್ನುಂಟು ಮಾಡದಿರುವುದು ಲೇಸು. ಮನೆಯಲ್ಲಿ ಅಪರೂಪಕ್ಕೆ ಸಂತೋಷ, ನೆಮ್ಮದಿ ಮೂಡಲಿದೆ. ಹಿರಿಯರು ಆಸ್ತಿಪಾಲಿನ ವಿಷಯದಲ್ಲಿ ನಿಮಗೆ ನೆರವಾಗುವರು.ಮಾಡಲಿರುವ ಸಂಪಾದನೆ ನ್ಯಾಯೋಚಿತವಾಗಿರಲಿ. ಹೆಚ್ಚಲಿರುವ ಸಂಪಾದನೆ ಮಕ್ಕಳ ಭವಿಷ್ಯಕ್ಕೆ ಮೀಸಲಿಡುವುದು ಮೇಲು. ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಕಡೆ ಹೆಚ್ಚಿನ ಗಮನಹರಿಸುವುದು ಮೇಲು. ವೈಯಕ್ತಿಕ ಆರೋಗ್ಯವನ್ನು ಯಾವುದೇ ಕಾರಣಕ್ಕೂ ಕಡೆಗಣಿಸಬೇಡಿ. ವಿಷ್ಣು ಸಹಸ್ರನಾಮ ಪಠಿಸಿ. ಗುರು-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**
ಪುಷ್ಪಾಲಂಕಾರ ಉದ್ಯಮಿಗಳಿಗೆ ಬೇಡಿಕೆ ಹೆಚ್ಚಿ ಅಧಿಕ ಲಾಭವಾಗಲಿದೆ. ಸ್ವಂತ ಉದ್ಯೋಗವನ್ನು ಆರಂಭಿಸಿದವರಿಗೆ ಕಾನೂನಿನ ಸಮಸ್ಯೆಗಳು ಎದುರಾಗಲಿವೆ. ವಾದ್ಯ ಕಲಾವೃಂದದವರಿಗೆ ಉತ್ತಮ ಅವಕಾಶಗಳು ಹೇರಳವಾಗಿ ದೊರೆಯಲಿವೆ, ಆಸ್ತಿ ಖರೀದಿ ವೇಳೆ ಮಧ್ಯವರ್ತಿಗಳ ಮಾತುಗಳಿಗೆ ಮರುಳಾಗದಿರಿ. ವಿದ್ಯಾವಂತ ಮಗನಿಗೆ ನೌಕರಿ ದೊರೆಯಲಿದೆ. ಆಪತ್ಕಾಲದಲ್ಲಿ ಸ್ನೇಹಿತರ ನೆರವು ಅತ್ಯವಶ್ಯಕವಾಗಲಿದೆ. ಮಹಿಳೆಯರು ಅಮೂಲ್ಯ ವಸ್ತುಗಳ ವಿಷಯದಲ್ಲಿ ಸಾಕಷ್ಟು ಜಾಗೃತರಾಗಿರುವುದು ಉತ್ತಮ. ಭಾನು-ಮಂಗಳ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**
ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳುವುದೇ ನಿಮ್ಮ ಏಕಾಂಗಿತನಕ್ಕಿರುವ ಮದ್ದು. ಪ್ರಾಪ್ತ ವಯಸ್ಕರಾದ ಮಕ್ಕಳನ್ನು ವ್ಯವಹಾರದಲ್ಲಿ ತೊಡಗಿಸಿಕೊಳ್ಳುವುದು ಮೇಲು. ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲು ಇದು ಸಕಾಲವಲ್ಲ. ಕ್ರೀಡಾಪಟುಗಳಿಗೆ ಉತ್ತಮ ತರಬೇತುದಾರರು ದೊರೆಯುವರು. ಸರ್ಕಾರಿ ನೌಕರರಿಗೆ ವೇತನದಲ್ಲಿ ಹೆಚ್ಚಳವಾಗಲಿದೆ. ನಿಮ್ಮ ನಿರ್ಧಾರಗಳು ಕೆಲವೊಮ್ಮೆ ಬದಲಾಗಬಹುದು. ಅತಿಥಿಗಳ ಆಗಮನ ಮನೆಯಲ್ಲಿ ಹಬ್ಬದ ವಾತಾವರಣವನ್ನು ಮೂಡಿಸಲಿದೆ. ಗುರುಗಳ ಸೇವೆ ಮಾಡಿ. ಬುಧ-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**
ಮಕ್ಕಳು ಮಾಡುವ ಹಳೆಯ ತಪ್ಪುಗಳು ಮತ್ತೆ ಮತ್ತೆ ಮರುಕಳಿಸಿದಾಗ, ಮನೆಯಲ್ಲಿ ದೊಡ್ಡ ಸಮಸ್ಯೆಯಾಗಬಹುದು. ಶಸ್ತ್ರಚಿಕಿತ್ಸಾ ವೈದ್ಯರಿಗೆ ವಿದೇಶದಲ್ಲಿ ಬೇಡಿಕೆ ಹೆಚ್ಚಲಿದೆ. ಸಹೋದ್ಯೋಗಿಗಳೊಂದಿಗೆ ಸೌಹಾರ್ದತೆಯಿಂದ ವರ್ತಿಸದೇ ಹೋದಲ್ಲಿ ನಿಮ್ಮ ಮೇಲೆ ಆಪಾದನೆಗಳು ಹೆಚ್ಚಾಗಬಹುದು. ಬಾಕಿ ಸಾಲದ ಮರುಪಾವತಿಯಿಂದಾಗಿ ಹಣಕಾಸಿನ ಪರಿಸ್ಥಿತಿ ತಕ್ಕಮಟ್ಟಿಗೆ ಸುಧಾರಿಸಲಿದೆ. ವೈವಾಹಿಕ ಜೀವನದ ಬಗ್ಗೆ ನಿಮ್ಮ ನಿಲುವನ್ನು ಬದಲಾಯಿಸುವುದು ಉತ್ತಮ. ನಡೆಯಲಿರುವ ಕುಲದೇವತಾರಾಧನೆಗೆ ಸಿದ್ಧತೆ ಜೋರಾಗಿಯೇ ನಡೆಯಲಿದೆ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**
ಮತ್ತೊಬ್ಬರ ಸಂತೋಷಕ್ಕಾಗಿ ಮಾಡುವ ಮೋಜು, ಮಸ್ತಿ ದುಂದು ವೆಚ್ಚವಾದೀತು. ಆರಂಭಿಸಿರುವ ಹೊಸ ಉದ್ಯಮದಲ್ಲಿ ಹೆಚ್ಚಿನ ಬಂಡವಾಳ ಹಾಕದಿರುವುದು ಮೇಲು. ಪಾಲುವಿಭಾಗದ ವಿಚಾರದಲ್ಲಿ ಯಾವುದೋ ಒಂದು ಹಳೆಯ ವಿಷಯ ಪ್ರಸ್ತಾಪಕ್ಕೆಬಂದು, ಸೋದರರ ನಡುವೆ ವಿವಾದಕ್ಕೆ ಕಾರಣವಾಗಲಿದೆ. ಮಗಳ ಮದುವೆ ವಿಚಾರವನ್ನು ಅನಾವಶ್ಯಕವಾಗಿ ಮುಂದೂಡಬೇಡಿ. ರೈತಾಪಿ ಮಿತ್ರರಿಗೆ ಸರ್ಕಾರದಿಂದ ಬರಬೇಕಾಗಿರುವ ಸೌಲಭ್ಯಗಳು ಸಕಾಲದಲ್ಲಿ ಕೈಸೇರಲಿವೆ. ಹೈನುಗಾರಿಕೆ ವಹಿವಾಟು ಹೆಚ್ಚಿದರೂ ಲಾಭಾಂಶ ಕಡಿಮೆಯಾಗಲಿದೆ. ಭಾನು-ಗುರು-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಚ.ಚ.ಚಿ.)**
ವಿದ್ಯುದುಪಕರಣಗಳನ್ನು ಸರಿಯಾಗಿ ಉಪಯೋಗಿಸದೇ ಹೋದಲ್ಲಿ ಅಪಾಯ ತಪ್ಪಿದ್ದಲ್ಲ. ನವದಂಪತಿಗಳ ಮನೆಗೆ ಖಾಯಂ ಅತಿಥಿ ಬರುವ ಲಕ್ಷಣಗಳು ಕಂಡುಬರುತ್ತಿವೆ. ಪ್ರತಿಯೊಂದಕ್ಕೂ ಮತ್ತೊಬ್ಬರನ್ನು ಆಶ್ರಯಿಸುವುದರಿಂದ ತಿರಸ್ಕಾರಕ್ಕೆ ಒಳಗಾಗಬೇಕಾದೀತು, ವಿದ್ಯಾವಂತ ಯುವಕರು ಪಾರಂಪರಿಕ ವೃತ್ತಿಯನ್ನೇ ಮುಂದುವರೆಸಿಕೊಂಡು ಹೋಗುವುದು ಮೇಲು. ಬರಹಗಾರರು ತಮ್ಮ ಹೊಸ ಕತೆ, ಕಾದಂಬರಿಗಳ ವಸ್ತುಗಳ ಬಗ್ಗೆ ಚರ್ಚೆ ನಡೆಸುವರು. ಸದ್ಯಕ್ಕೆ ದೂರದೂರುಗಳ ಪ್ರಯಾಣ ಅಷ್ಟು ಸೂಕ್ತವಲ್ಲ. ಮಹಿಳೆಯರಿಗೆ ಶುಭ ದಿನಗಳು. ಮಂಗಳ-ಬುಧ-ಗುರು-ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ: 23.4.2023 ನೇ ಭಾನುವಾರ**
**ಅಕ್ಷಯ ತೃತೀಯ, ಬಸವ ಜಯಂತಿ.**

# ನಗರಾದ್ಯಂತ ಸಡಗರ - ಸಂಭ್ರಮದಿಂದ ರಂಜಾನ್ ಆಚರಣೆ



ದಾವಣಗೆರೆ, ಏ. 22- ಪವಿತ್ರ ರಂಜಾನ್ ಹಬ್ಬವನ್ನು ನಗರಾದ್ಯಂತ ಮುಸ್ಲಿಂ ಬಾಂಧವರು ಇಂದು ಸಡಗರ - ಸಂಭ್ರಮದಿಂದ ಆಚರಿಸಿದರು.

ಪಿ.ಬಿ. ರಸ್ತೆ, ಹಳೆ ಈದ್ಗಾ, ರಜಾಉಲ್ ಮುಸ್ತಾಫನಗರ, ಎಸ್‌ಓಜಿ ಕಾಲೋನಿಯಲ್ಲಿರುವ ಹೊಸ ಈದ್ಗಾಗಳಲ್ಲಿ ಸಾಮೂಹಿಕ ಪ್ರಾರ್ಥನೆ ಈದ್-ಉಲ್-ಫಿತರ್ ನಮಾಜ್ ಸಲ್ಲಿಸಿದರು.

ಕಳೆದ ಒಂದು ತಿಂಗಳಿನಿಂದ ಉಪವಾಸ, (ರೋಜಾ) ಧ್ಯಾನದಲ್ಲಿ ಮಗ್ನರಾಗಿದ್ದ ಮುಸ್ಲಿಂ ಬಾಂಧವರು ಚಂದ್ರದರ್ಶನದೊಂದಿಗೆ ರಂಜಾನ್ ಹಬ್ಬವನ್ನು ಆಚರಿಸುವ ಮೂಲಕ ಒಬ್ಬರಿಗೊಬ್ಬರು ಆಲಂಗಿಸಿ, ಹಸ್ತಲಾಘವ ಮಾಡಿ ಸಂತೋಷವನ್ನು ವಿನಿಮಯ ಮಾಡಿಕೊಂಡರು.

ಹೊಸ ಬಟ್ಟೆಯನ್ನು ಧರಿಸಿಕೊಂಡು ತಮ್ಮ ತಮ್ಮ ಮಕ್ಕಳೊಂದಿಗೆ ನಗರದ ವಿವಿಧ ಪ್ರದೇಶಗಳಿಂದ ತಂಡೋಪ ತಂಡವಾಗಿ ಈದ್ಗಾದತ್ತ ಧಾವಿಸುತ್ತಿದ್ದ ಮುಸ್ಲಿಂ ಬಾಂಧವರು ರಸ್ತೆಯುದ್ದಕ್ಕೂ 'ಅಲ್ಲಾಹು ಅಕ್ಬರ್, ಅಲ್ಲಾಹು ಅಕ್ಬರ್' ಎಂಬ ಶ್ಲೋಕಗಳನ್ನು ಪಠಿಸುತ್ತಾ ಹೆಜ್ಜೆ ಹಾಕುತ್ತಿದ್ದರು.

ತಮ್ಮ ಪ್ರಾಣ, ಆಸ್ತಿ, ಆಭರಣಗಳ ತೆರಿಗೆ ಅಂದರೆ ಜಕಾತ್-ಫಿತ್ರಾದ ಹಣವನ್ನು ಬಡವರಿಗೆ, ನಿರ್ಗತಿಕರಿಗೆ ನೀಡುವ ಮೂಲಕ ಸರ್ವರೂ ಸಹ ಸಂತೋಷದ ಕ್ಷಣಗಳು ಸವಿಯಲಿ ಎಂಬ ಮಹತ್ವ ಹೊಂದಿರುವ ರಂಜಾನ್ ಹಬ್ಬದಲ್ಲಿ ವಿಶೇಷ ಪ್ಯಾಕೇಜ್ (ಆಹಾರ ಸಾಮಗ್ರಿ) ಗಳನ್ನು ನೀಡಿ ಸಂಭ್ರಮಿಸಿದರು.

ತಂಜೀಮುಲ್ ಮುಸ್ಲಿಂಮೀನ್ ಫಂಡ್ ಅಸೋಸಿಯೇಷನ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಈದ್ ಪ್ರಾರ್ಥನೆಯನ್ನು ಬೋಧಿಸಿದ ಮೌಲಾನಾ ಸೈಯದ್ ನಸೀರ್ ಅಹಮ್ಮದ್ ಮಿಸ್ಸಾಯಿ ಅವರು, ವಿಶ್ವಾದಾದ್ಯಂತ ಸಮಸ್ತ ಬಾಂಧವರಿಗೆ ಸುಖ, ಶಾಂತಿ, ಸಮೃದ್ಧಿಯನ್ನು 'ಅಲ್ಲಾಹು' ನೀಡಲಿ ಎಂದು ದುವಾ ಮಾಡುವ ಮೂಲಕ ತಮ್ಮ ತಮ್ಮ ಮಕ್ಕಳಿಗೆ ಸಾಮಾಜಿಕ ಶಿಕ್ಷಣದ ಮೂಲಕ ಧಾರ್ಮಿಕ ಶಿಕ್ಷಣವನ್ನೂ ಸಹ ಕೊಡಿಸಲು ಮುಂದಾಗಿ ಎಂದು ಪೋಷಕರಿಗೆ ಕರೆ ನೀಡಿ ಹಬ್ಬದ ಶುಭಾಶಯ ಕೋರಿದರು.

ಇತ್ತೀಚಿನ ದಿನಗಳಲ್ಲಿ ಯುವ ಪೀಳಿಗೆ ದುಶ್ಚಟಗಳಿಗೆ ಬಲಿಯಾಗುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಮೌಲಾನಾ ನಸೀರ್ ಅಹಮದ್ ಅವರು, ವಿಶ್ವದಲ್ಲಿನ ಘಟನಾವಳಿಗಳ ಬಗ್ಗೆ ಅರಿಯ ಬೇಕೆಂದು ವಿವರಿಸಿ, ಸರ್ವರೂ ಸಹಬಾಳ್ವೆಯೊಂದಿಗೆ ಸಾಗಬೇಕೆಂದು ಸಂದೇಶ ನೀಡಿದರು.

**ಸಮಯ, ಪ್ರಚಾರ ಸ್ವಲ್ಪ ಗೊಂದಲ :** ರಂಜಾನ್ ಹಬ್ಬದ ಪ್ರಾರ್ಥನೆ ಪ್ರತಿ ವರ್ಷ ಬೆಳಿಗ್ಗೆ 10.30 ಕ್ಕೆ ನಿಗದಿಗೊಳಿಸಲಾಗುತ್ತಿತ್ತು. ಆದರೆ, ತಂಜೀಮುಲ್‌ನ ನೂತನ ಕಮಿಟಿ ಈ ಬಾರಿ 10 ಗಂಟೆಗೆ ಪ್ರಾರ್ಥನೆಯ ಸಮಯ ನಿಗದಿಗೊಳಿಸಿದ್ದಕ್ಕೆ ಕೆಲವರು ತೊಂದರೆ ಅನುಭವಿಸಬೇಕಾದ ಪ್ರಸಂಗಕ್ಕೆ ಒಳಗಾದರೂ ಇನ್ನೂ ಜನ ಆಗಮಿಸುತ್ತಿದ್ದರು. 'ವಜೂ' ಮಾಡುತ್ತಿದ್ದರು. ಅಷ್ಟರಲ್ಲಿಯೇ ಪ್ರಾರ್ಥನೆಗೆ ನಿಂತಾಗ ತಮ್ಮ ತಮ್ಮ ಸ್ಥಳಗಳನ್ನು ಹುಡುಕಿಕೊಂಡು ಹೋಗಲು ಕಷ್ಟವಾಯಿತು.

ಅಷ್ಟೇ ಅಲ್ಲದೇ, ನಿನ್ನೆಯ ದಿನ ಪತ್ರಿಕೆಗಳಲ್ಲಿ ಚಂದ್ರ ಗೋಚರಿಸದಿದ್ದರೆ ಭಾನುವಾರ ಹಬ್ಬ ಎಂಬ ತಂಜೀಮ್ ನ ವರದಿ ಸ್ವಲ್ಪ ಗೊಂದಲ ನಿರ್ಮಿಸಿತ್ತು ಎಂಬ ಅಂಶವನ್ನು ವಿವರಿಸಿದ ಕೆಲವರು ತಮ್ಮ ಸಂಬಂಧಿಗಳಿಗೆ ಈ ಮಾಹಿತಿಯನ್ನು ನೀಡಿ ಮುಜುಗರಕ್ಕೀಡಾದ ಮಾಹಿತಿ ಲಭ್ಯವಾಯಿತು.

ಜನಸಂದಣಿ ಹೆಚ್ಚಾದರೂ ಸಹ ಒಂದೇ ಗೇಟ್ ಮೂಲಕ ಆಗಮನ-ನಿರ್ಗಮನವಾಗುವುದರಿಂದ ಹಿರಿಯ ಮುತ್ಸದ್ಧಿಗಳು ತೊಂದರೆ ಅನುಭವಿಸಬೇಕಾಗುತ್ತದೆ. ಈದ್ಗಾಕ್ಕೆ ಇನ್ನೊಂದು ಗೇಟ್ ನಿರ್ಮಾಣದ ಅವಶ್ಯಕತೆ ಇದೆ ಎಂಬುದನ್ನು ಸಲಹೆ ಮಕಬುಲ್ ಅಹಮದ್ ತಂಜೀಮುಲ್‌ಗೆ ನೀಡಿದರು.

ತಂಜೀಮ್ ಅಧ್ಯಕ್ಷ ದಾದಾಪೀರ್ (ದಾದು ಸೇಠ್) ಅವರು ಸಮಾಜದ ಅಭಿವೃದ್ಧಿ ಕುರಿತು ಸಂದೇಶ ನೀಡಿ ಸರ್ವರಿಗೂ ಹಬ್ಬದ ಶುಭಾಶಯ ಕೋರಿದರು. ಇದೇ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳನ್ನು ಪುರಸ್ಕರಿಸಲಾಯಿತು.

## ರಿಲೈಯನ್ಸ್‌ಗೆ ದಾಖಲೆ ಲಾಭ

ನವದೆಹಲಿ, ಏ. 22 – ರಿಲೈಯನ್ಸ್ ಇಂಡಸ್ಟ್ರೀಸ್ ಮಾರ್ಚ್ ಚತುರ್ಥದಲ್ಲಿ 19,299 ಕೋಟಿ ರೂ.ಗಳ ಲಾಭ ಗಳಿಸಿದೆ. ಇದು ಕಳೆದ ಚತುರ್ಥಕ್ಕಿಂತ ಶೇ.19ರಷ್ಟು ಹೆಚ್ಚಳವಾಗಿದೆ. 2023ರ ಜನವರಿ - ಮಾರ್ಚ್ ಚತುರ್ಥದಲ್ಲಿ 19,299 ಕೋಟಿ ರೂ. ಲಾಭ ಬಂದಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 16,203 ಕೋಟಿ ರೂ.ಗಳ ಲಾಭ ಬಂದಿತ್ತು. ಕಂಪನಿ ಚತುರ್ಥವೊಂದರಲ್ಲಿ ಇಷ್ಟೊಂದು ಲಾಭ ಗಳಿಸಿರುವುದು ಇದೇ ಮೊದಲು.

## 5ನೇ ಉಡಾನ್ ಯೋಜನೆ

ನವದೆಹಲಿ, ಏ. 22 – ದುರ್ಗಮ ಪ್ರದೇಶಗಳಲ್ಲಿ ವೈಮಾನಿಕ ಸಂಪರ್ಕ ಹೆಚ್ಚಿಸಲು ಕೇಂದ್ರ ಸರ್ಕಾರ ಐದನೇ ಸುತ್ತಿನ ಪ್ರಾಂತೀಯ ವೈಮಾನಿಕ ಸಂಪರ್ಕ ಯೋಜನೆ ಆರಂಭಿಸಿದೆ. ಉಡಾನ್ 5.0 ಯೋಜನೆಯ ಮೂಲಕ ವೈಮಾನಿಕ ಸಂಪರ್ಕ ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಈ ಯೋಜನೆಯ ಮೂಲಕ 1,000 ಹೊಸ ಮಾರ್ಗ ಹಾಗೂ 50 ಹೆಚ್ಚುವರಿ ವಿಮಾನ ನಿಲ್ದಾಣ, ಹೆಲಿಪ್ಯಾಡ್ ಹಾಗೂ ಜಲವಿಮಾನ ನೆಲೆಗಳು ಸ್ಥಾಪನೆಯಾಗುವ ನಿರೀಕ್ಷೆ ಇದೆ.

## ಬಂಗಲೆ ತೆರವು

(1ನೇ ಪುಟದಿಂದ)
ಬಂಗಲೆಯಲ್ಲಿದ್ದರು. ಅನರ್ಹಗೊಂಡಿರುವ ಹಿನ್ನೆಲೆಯಲ್ಲಿ ಈ ನಿವಾಸವನ್ನು ಏ.22ರ ಒಳಗೆ ಖಾಲಿ ಮಾಡುವಂತೆ ತಿಳಿಸಲಾಗಿತ್ತು.


ಈ ಬಗ್ಗೆ ಮಾತನಾಡಿರುವ ರಾಹುಲ್ ಗಾಂಧಿ, ಸತ್ಯ ಹೇಳಿದ್ದಕ್ಕಾಗಿ ನಾನು ಬೆಲೆ ತೆರುತ್ತಿದ್ದೇನೆ. ಸತ್ಯಕ್ಕಾಗಿ ಯಾವುದೇ ಬೆಲೆ ತೆರಲು ಸಿದ್ಧ. ಬೆಲೆ ಏರಿಕೆ ಹಾಗೂ ಭ್ರಷ್ಟಾಚಾರದ ವಿಷಯ ಪ್ರಸ್ತಾಪಿಸುವುದನ್ನು ಮುಂದುವರೆಸುತ್ತೇನೆ ಎಂದಿದ್ದಾರೆ.

## ಸರ್ಕಾರಿ ನಿಯಂತ್ರಣ

(1ನೇ ಪುಟದಿಂದ)
ಉದ್ಯಮದ ರಾಷ್ಟ್ರೀಕರಣ ಎಂದರೆ, ಇನ್ನು ಕೆಲವರು ಕೇವಲ ನಿರ್ಬಂಧ ಮಾತ್ರ ಎಂದು ಹೇಳುತ್ತಿದ್ದಾರೆ.

ಲಿಥಿಯಂ ಗಣಿಯಲ್ಲಿ ಚಿಲಿ ವಿಶ್ವದಲ್ಲೇ ಮೂರನೇ ಸ್ಥಾನದಲ್ಲಿದೆ. ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಇತ್ತೀಚಿನ ದಿನಗಳಲ್ಲಿ ಬೇರೆ ದೇಶಗಳು ಚಿಲಿ ಹಿಂದೆ ಹಾಕಿ ಲಿಥಿಯಂ ಉತ್ಪಾದಿಸುತ್ತಿವೆ. ಈ ನಡುವೆ ಬೋರಿಕ್ ತೆಗೆದುಕೊಂಡಿರುವ ಕ್ರಮ ಪ್ರಾಮುಖ್ಯತೆ ಪಡೆದುಕೊಂಡಿದೆ.

# ತರಳಬಾಳು ಬೃಹನ್ಮಠದಿಂದ ನಗರದಲ್ಲಿ ಇಂದು ಬಸವ ಜಯಂತಿ




ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ವತಿಯಿಂದ ಇಂದು ಸಂಜೆ 5.30 ಕ್ಕೆ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ಬಸವ ಜಯಂತಿ ಕಾರ್ಯಕ್ರಮ ನಡೆಯಲಿದೆ.

ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಜರ್ಮನಿಯ ಪ್ರೊ. ಗೀತಾ ಧರ್ಮಪಾಲ್, ಬೆಂಗಳೂರಿನ ಡಾ. ಸುಧಾ ಸೀತಾರಾಮನ್, ರಾಜ್ಯ ರೈತ ಸಂಘದ ಅಧ್ಯಕ್ಷರೂ, ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಹೆಚ್.ಆರ್. ಬಸವರಾಜಪ್ಪ, ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಗೌರವ ಕಾರ್ಯದರ್ಶಿ ಚಂದ್ರಕಾಂತ ಮಟ್ಟಿ ಆಗಮಿಸಲಿದ್ದಾರೆ.

'ಬಸವಣ್ಣನವರ ವಚನಗಳಲ್ಲಿ ಸಮಾನತೆಯ ಆಶಯಗಳು' ಕುರಿತು ತುಮಕೂರು ಸಂಸ್ಕೃತಿ ಚಿಂತಕ ಡಾ. ನಟರಾಜ ಎಸ್. ಬೂದಾಳು ಉಪನ್ಯಾಸ ನೀಡಲಿದ್ದಾರೆ. ಪ್ರೊ. ಬಸವನಾಳ ಶಿವಲಿಂಗಪ್ಪ ಅವರ ಸಂಪಾದಕತ್ವದ 'ಬಸವಣ್ಣನವರ ಷಟ್‌ಸ್ಥಲದ ವಚನಗಳು' ಕುರಿತ ಪುಸ್ತಕ ಬಿಡುಗಡೆಯಾಗಲಿದೆ.

ಇದೇ ಸಂದರ್ಭದಲ್ಲಿ ಶ್ರೀ ತರಳಬಾಳು ಜಗದ್ಗುರುಗಳವರಿಂದ 'ಶಿವಶರಣರ ವಚನ ಸಂಪುಟ' ತಂತ್ರಾಂಶದ ಪ್ರಾತ್ಯಕ್ಷಿಕೆ ನಡೆಸಿಕೊಡಲಿದ್ದಾರೆ.

ಸುಶ್ರಾವ್ಯ ಸಂಗೀತ ವಿದ್ಯಾಲಯದ ಯಶಾ ದಿನೇಶ್, ಹಿಂದುಸ್ಥಾನಿ ಗಾಯಕ ಆನಂದ್ ಆರ್. ಪಾಟೀಲ್ ಅವರಿಂದ ವಚನ ಗೀತೆ, ಶ್ರೀ ತರಳಬಾಳು ಜಗದ್ಗುರು ರೆಸಿಡೆನ್ಸಿಯಲ್ ಪ್ರೌಢಶಾಲೆಯ ಮಕ್ಕಳಿಂದ ವಚನ ನೃತ್ಯ, ನಮನ ಅಕಾಡೆಮಿಯ ಡಿ.ಕೆ. ಮಾಧವಿ, ನೂಪುರ ಕಲಾ ಸಂಸ್ಥೆಯ ಬೃಂದಾ ಅವರಿಂದ ಭರತನಾಟ್ಯ ಕಾರ್ಯಕ್ರಮ ಇರುತ್ತದೆ.

# ಹರಿಹರದ ಶಾಸಕ ರಾಮಪ್ಪ ನಿವಾಸಕ್ಕೆ ಎಐಸಿಸಿ ಕಾರ್ಯದರ್ಶಿ ಭೇಟಿ




ಹರಿಹರ, ಏ.22- ಎಐಸಿಸಿ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿಗಳಾದ ಮಯೂರ್ ಜಯರಾಮ್ ಅವರು ಶುಕ್ರವಾರ ರಾತ್ರಿ ಶಾಸಕ ಎಸ್. ರಾಮಪ್ಪ ಅವರ ನಿವಾಸಕ್ಕೆ ಭೇಟಿ ನೀಡಿ ಮಾತುಕತೆ ನಡೆಸಿದರು.

ರಾಮಪ್ಪ ಅವರ ಪಕ್ಷ ನಿಷ್ಠೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಮಯೂರ್ ಜಯರಾಮ್ ಅವರು ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿಕೊಂಡು ಬನ್ನಿ ಎಂದು ತಿಳಿಸಿ, ಮುಂದಿನ ದಿನಗಳಲ್ಲಿ ಉತ್ತಮ ಅವಕಾಶ ಸಿಗಲಿವೆ ಎಂದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಕೆಪಿಸಿಸಿ ಕಾರ್ಯದರ್ಶಿ ಡಿ. ಬಸವರಾಜ್, ಡಿಎಸ್‌ಎಸ್ ಸಂಚಾಲಕ ಪಿ.ಜೆ. ಮಹಾಂತೇಶ್ ಮತ್ತಿತರರು ಈ ವೇಳೆ ಹಾಜರಿದ್ದರು.

# ಪಿಯುಸಿ ಪರೀಕ್ಷೆ : ಲಲಿತಾ ಪದವಿ ಪೂರ್ವ ಕಾಲೇಜಿಗೆ ಶೇ. 100 ಫಲಿತಾಂಶ






ದಾವಣಗೆರೆ, ಏ. 22- ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ನಗರದ ಲಲಿತಾ ಪದವಿ ಪೂರ್ವ ಕಾಲೇಜಿಗೆ ಶೇ. 100ರಷ್ಟು ಫಲಿತಾಂಶ ಬಂದಿದ್ದು, ವಿಜ್ಞಾನ ವಿಭಾಗದ ವೆಂಕಟ್ ಕಾರ್ತಿಕ್ ಶೇ. 97.5ರಷ್ಟು ಅಂಕ ಗಳಿಸಿ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಅಶ್ವಿನಿ ಕೆ.ಎಂ., ಸಿ.ಎನ್.ವೀರೇಶ್ ಮತ್ತು ಚಂದನ್ ಬಿ. ಕೋರಿ ಶೇ. 97ರಷ್ಟು ಅಂಕ ಪಡೆದು ಎರಡನೇ ಸ್ಥಾನ ಹಾಗೂ ತರುಣ್ ಕೆ. ಶೇ. 96.8ರಷ್ಟು ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.

ವಿಜ್ಞಾನ ವಿಭಾಗದಲ್ಲಿ 34 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 34 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. 16 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 15 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 3 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ 15 ವಿದ್ಯಾರ್ಥಿಗಳು ಪರೀಕ್ಷೆಯನ್ನು ತೆಗೆದು ಕೊಂಡಿದ್ದು, 15 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಅನಿಲ್ ಬಿ.ಎಂ. ಶೇ. 97.75ರಷ್ಟು ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಭಾಗ್ಯಲಕ್ಷ್ಮಿ ಎಂ.ಎನ್. ಶೇ. 96.50 ರಷ್ಟು ಅಂಕ ಪಡೆದು ದ್ವಿತೀಯ ಹಾ ಗೂ ಕು.ಇಂದುದೀಪಾ ಶೇ. 90.75 ರಷ್ಟು ತೃತೀಯ ಸ್ಥಾನ ಪಡೆದಿದ್ದಾರೆ. 5 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 7 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಮತ್ತು 3 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಇ.ಆರ್. ಶಶಿಕಲಾ, ಕಾರ್ಯದರ್ಶಿ ಎಂ.ಇ. ರವಿರಾಜ್ ಅಭಿನಂದಿಸಿದ್ದಾರೆ.


**ರಾಜನಹಳ್ಳಿ ಮದ್ದುರಾಯಪ್ಪ ಜ್ಯೂಯಲರಿ ಮಾರ್ಟ್**
ದಯಾನಂದ ಬಿಲ್ಡಿಂಗ್, ಮಂಡಿಪೇಟೆ, ದಾವಣಗೆರೆ.
ಫೋ. : 08192-296550, ಮೊ. : 74835 28258

**ವೈವಿಧ್ಯಮಯ ಆಭರಣಗಳ ಮೇಳ**

ಪ್ರೀತಿಯ ಬಂಧುಗಳೇ,
ಶ್ರೀ ಶೋಭಕೃತು ನಾಮ ಸಂವತ್ಸರದ ಅಕ್ಷಯ ತೃತೀಯ ಮತ್ತು ಬಸವ ಜಯಂತಿಯ ಶುಭಾಶಯಗಳು ಹಾಗು ಸೂರ್ಯ ದಿವ್ಯಕಿರಣಗಳು ನಮ್ಮೆಲ್ಲರಿಗೆ ಹೊಸ ಚೇತನವನ್ನು ನೀಡಿವೆ. ಬನ್ನಿ... ಸಂಭ್ರಮಿಸೋಣ.
ಏಪ್ರಿಲ್ ತಿಂಗಳ ದಿನಾಂಕ 21, 22 ಮತ್ತು 23 ರಂದು ನಮ್ಮ ಅಂಗಡಿಯಲ್ಲಿ ವೈವಿಧ್ಯಮಯ ಆಭರಣಗಳ ಮೇಳ ನಡೆಯಲಿದೆ ಹಾಗೂ ಕರ್ನಾಟಕ ಗೋಲ್ಡ್ ಫೆಸ್ಟಿವಲ್ಲನ್ನು ಹಮ್ಮಿಕೊಂಡಿದ್ದೇವೆ. ನಿಮ್ಮವರೊಂದಿಗೆ ಬಂಧು ಆಭರಣಗಳನ್ನು ಖರೀದಿಸಿ, ವಿಶೇಷ ರಿಯಾಯಿತಿ ಹಾಗೂ ಹಲವಾರು ಆಕರ್ಷಕ ಬಹುಮಾನಗಳನ್ನು ಪಡೆಯಿರಿ.
ನಿಮ್ಮ **ಆರ್.ಡಿ. ಬದ್ರಿನಾಥ್**
*ಮೂರು ತಲೆಮಾರುಗಳಿಂದ ಚಿನ್ನ, ಬೆಳ್ಳಿ ಮತ್ತು ರತ್ನ ಪಡೆ*
*ಬೇಡಿಕೆಗಳ ಪೂರೈಸಲು ನಿಮ್ಮ ಸೇವೆಯಲ್ಲಿ ತೊಡಗಿರುವ ಆರ್.ಎಂ.ಜೆ.ಎಂ.*




॥ ಶ್ರೀ ಗಣೇಶಾಯ ನಮಃ॥
**ಹರಿಹರ ನಗರದಲ್ಲಿ ನೂತನವಾಗಿ ಆರಂಭವಾಗಿರುವ**

**ಕಲ್ಪವೃಕ್ಷ**

**KALPAVRUKSHA**
ಮುಖ್ಯ ರಸ್ತೆ, ಹರಿಹರ-577 601.
ಚಿನ್ನ/ಬೆಳ್ಳಿ/ವಜ್ರದ ಅಂಗಡಿ ಇವರ ವತಿಯಿಂದ
ಸಮಸ್ತ ಗ್ರಾಹಕರಿಗೆ ರಂಜಾನ್, ಬಸವೇಶ್ವರ ಜಯಂತಿ
ಅಕ್ಷಯ ತೃತೀಯ ಹಬ್ಬದ ಹಾರ್ದಿಕ ಶುಭಾಶಯಗಳು
BIS 916
ಅಪ್ಪಟ ಚಿನ್ನ ಹಾಗೂ
91.6 ಹಾಲ್ ಮಾರ್ಕ್‌ನ
ಅತಿ ಸುಂದರವಾದ ಆಭರಣಗಳಿಗೆ
ಒಮ್ಮೆ ಭೇಟಿ ಕೊಡಿ...
ಗುಣಮಟ್ಟತೆ ಹಾಗೂ ಬಗೆ ಬಗೆಯ ವಿನ್ಯಾಸಗೊಳಿಸಿದ ಆಭರಣಗಳು ಸೂಕ್ತ ಬೆಲೆಯಲ್ಲಿ ಲಭ್ಯ...
ಬಂಗಾರದ ಅಂಗಡಿಯಲ್ಲಿ ಅನುಭವವಿರುವ ನುರಿತ ಕೆಲಸಗಾರರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುತ್ತದೆ.
ಸಂಪರ್ಕಿಸಿ : ರಿಷಬ್ - 8105609901, ಪ್ರಕಾಶ್ - 98443 59130
ಸರ್ವರಿಗೂ ಆದರದ ಸು-ಸ್ವಾಗತ...



**ಸಾಯಿ ಗಣೇಶ್ ಪ್ರೊ ಡಿಟೇಲಿಂಗ್ ಸ್ಟುಡಿಯೋ**
INERIOR & EXTERIOR DETAILING
POLISHING | CERAMIC COATING
PAINT PROTECTION FILM (PPF)
WRAPPING | SUN CONTROL FILM

Get Your Dream Car . . A COMPLETE PROTECTION
SAI GANESH
PRO DETAILING STUDIO

3M AVERY DENNISON LLumar GARWARE KS systemX
Address : Site No. 167. # 2580/167, Double Road, Near Sapthagiri School, S.S. Layout 'B' Block, Davangere-577004, Karnataka.
For Enquiry & Bookings Contact : 9513193857



# ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರಕ್ಕೆ

## ಹೋಟೆಲ್ ಉದ್ಯಮಿ

# ಸುರ್ಜಿತ್ ಜಿ. ಸ್ಪರ್ಧೆ



ನಾಡಿನ ಸಮಸ್ತ ಜನತೆಗೆ
ಹಾಗೂ ಉತ್ತರ ವಿಧಾನಸಭಾ ಕ್ಷೇತ್ರದ
ಸರ್ವರಿಗೂ ಪವಿತ್ರ ಹಬ್ಬಗಳಾದ
**ಬಸವ ಜಯಂತಿ** ಮತ್ತು
**ರಂಜಾನ್ ಹಬ್ಬಗಳ**
**ಶುಭಾಶಯಗಳು**



ಮಾತಾ-ಪಿತೃಗಳಾದ
ಶ್ರೀಮತಿ ಸುಧಾ ಕೆ.ಸಿ. ಮತ್ತು ಶ್ರೀ ಗುರುಬಸಪ್ಪ

**ದೂರದೃಷ್ಟಿಯ ಹೋಟೆಲ್ ಉದ್ಯಮಿ**
**ಸುರ್ಜಿತ್ ಜಿ.** ದಾವಣಗೆರೆ ಉತ್ತರ ಕ್ಷೇತ್ರದ
ಶಾಸಕ ಸ್ಥಾನಕ್ಕೆ ಉಮೇದುವಾರಿಕೆ ಘೋಷಿಸಿದ್ದಾರೆ.

ದಾವಣಗೆರೆ ಮತ್ತು ಮೈಸೂರಿನಲ್ಲಿ ಅನೇಕ ಹೋಟೆಲ್‌ಗಳನ್ನು ಹೊಂದಿರುವ ಸುರ್ಜಿತ್ ಆತಿಥ್ಯದಿಂದ ಉದ್ಯಮದಲ್ಲಿ ಪ್ರಸಿದ್ಧ ವ್ಯಕ್ತಿಯಾಗಿದ್ದಾರೆ. ಗುಣಮಟ್ಟದ ಸೇವೆಗೆ ಅವರ ಬದ್ಧತೆ ಮತ್ತು ಸುಸ್ಥಿರ ಮತ್ತು ಪರಿಸರ ಸ್ನೇಹಿ ಅಭ್ಯಾಸಗಳಿಂದಾಗಿ ಅವರು ಹೆಸರುವಾಸಿಯಾಗಿದ್ದಾರೆ.



ಸುರ್ಜಿತ್ ಹುಟ್ಟಿ ಬೆಳೆದದ್ದು ದಾವಣಗೆರೆಯಲ್ಲಿ, ಪ್ರಾಥಮಿಕ ಶಿಕ್ಷಣವನ್ನು ಹರಿಹರಪುರದ ಗುರುಕುಲದಲ್ಲಿ ಪಡೆದರು. ಅವರು ಯುಕೆಯಲ್ಲಿ ಉನ್ನತ ಶಿಕ್ಷಣವನ್ನು ಮುಂದುವರೆಸಿದರು. ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಿಂದ ತಮ್ಮ ಸ್ನಾತಕೋತ್ತರ ಪದವಿಯನ್ನು ಪಡೆದರು. ತನ್ನ ಅಧ್ಯಯನವನ್ನು ಪೂರ್ಣಗೊಳಿಸಿದ ನಂತರ, ಸುರ್ಜಿತ್ ಭಾರತಕ್ಕೆ ಮರಳಿದರು ಮತ್ತು ಉದ್ಯಮದಲ್ಲಿ ತಮ್ಮ ವೃತ್ತಿಜೀವನ ಪ್ರಾರಂಭಿಸಿದರು.

ತಮ್ಮ ವೃತ್ತಿ ಜೀವನದುದ್ದಕ್ಕೂ, ಸುರ್ಜಿತ್ ಅವರು ಸಮುದಾಯಕ್ಕೆ ಮರಳಿ ನೀಡಲು ಬದ್ಧರಾಗಿದ್ದಾರೆ. ಅವರು ಸ್ಥಳೀಯ ಶಾಲೆಗಳನ್ನು ಬೆಂಬಲಿಸುವುದು ಮತ್ತು ಸ್ವಚ್ಛತಾ ಅಭಿಯಾನಗಳನ್ನು ಪ್ರಾಯೋಜಿಸುವುದು ಸೇರಿದಂತೆ, ವಿವಿಧ ಸಾಮಾಜಿಕ ಮತ್ತು ಪರಿಸರ ಉಪಕ್ರಮಗಳಲ್ಲಿ ತೊಡಗಿಸಿಕೊಂಡಿದ್ದಾರೆ. ತಮ್ಮ ಸಮುದಾಯಗಳಲ್ಲಿ ಸಕಾರಾತ್ಮಕ ಪ್ರಭಾವ ಬೀರಲು ತಮ್ಮ ಸಂಪನ್ಮೂಲಗಳು ಮತ್ತು ಪ್ರಭಾವವನ್ನು ಬಳಸುವುದು ಯಶಸ್ವೀ ಉದ್ಯಮಿಗಳ ಜವಾಬ್ದಾರಿಯಾಗಿದೆ ಎಂದು ಸುರ್ಜಿತ್ ನಂಬುತ್ತಾರೆ.

ಸುರ್ಜಿತ್ ಅವರು **'ಸಂಯುಕ್ತ ವಿಕಾಸ ಪಕ್ಷದ'** ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿದ್ದು, ದಾವಣಗೆರೆ ಉತ್ತರ ಕ್ಷೇತ್ರದ ಸುರ್ಜಿತ್ ಅವರ ದೃಷ್ಟಿ ಎಲ್ಲಾ ನಿವಾಸಿಗಳ ಜೀವನದ ಗುಣಮಟ್ಟವನ್ನು ಸುಧಾರಿಸುವತ್ತ ಗಮನಹರಿಸಿದೆ. ಸಮುದಾಯದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯ ಅಗತ್ಯ ಎಂದು ಅವರು ನಂಬುತ್ತಾರೆ. ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸ್ಥಾಪಿಸಲು ಮತ್ತು ಕ್ಷೇತ್ರದಲ್ಲಿ ಅಸ್ತಿತ್ವದಲ್ಲಿರುವ ಶಾಲೆಗಳನ್ನು ಸುಧಾರಿಸಲು ಸುರ್ಜಿತ್ ಯೋಚಿಸಿದ್ದಾರೆ. ಶಿಕ್ಷಣ ಮತ್ತು ಆರೋಗ್ಯದ ಜೊತೆಗೆ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಸುರ್ಜಿತ್ ಬದ್ಧರಾಗಿದ್ದಾರೆ.

ಉದ್ಯೋಗಾವಕಾಶಗಳನ್ನು ಗುರುತಿಸಲು ಮತ್ತು ಅಗತ್ಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಜನರಿಗೆ ಸಹಾಯ ಮಾಡಲು ತರಬೇತಿ ಕಾರ್ಯಕ್ರಮಗಳನ್ನು ರಚಿಸಲು ಸ್ಥಳೀಯ ವ್ಯವಹಾರಗಳೊಂದಿಗೆ ನಿಕಟವಾಗಿ ಕೆಲಸ ಮಾಡಲು ಅವರು ಯೋಚಿಸಿದ್ದಾರೆ. ಬಡವರಿಗೆ ವಸತಿ ಕಲ್ಪಿಸುವ ಬಗ್ಗೆಯೂ ಸುರ್ಜಿತ್ ಉತ್ಸುಕರಾಗಿದ್ದಾರೆ. ಪ್ರತಿಯೊಬ್ಬರ ಮನೆಗೆ ಕರೆ ಮಾಡಲು ಸುರಕ್ಷಿತ ಮತ್ತು ಆರಾಮದಾಯಕವಾದ ಸ್ಥಳಕ್ಕೆ ಅರ್ಹರು ಎಂದು ಅವರು ನಂಬುತ್ತಾರೆ. ಅಗತ್ಯವಿರುವವರಿಗೆ ಕೈಗೆಟಕುವ ದರದಲ್ಲಿ ವಸತಿ ಪರಿಹಾರಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳೊಂದಿಗೆ ಕೆಲಸ ಮಾಡಲು ಸುರ್ಜಿತ್ ಯೋಜಿಸಿದ್ದಾರೆ. ಅಂತಿಮವಾಗಿ, ಸುರ್ಜಿತ್ ಅವರು ಪರಿಸರ ಸ್ನೇಹಿ ಅಭ್ಯಾಸಗಳನ್ನು ಉತ್ತೇಜಿಸಲು ಮತ್ತು ಕ್ಷೇತ್ರಕ್ಕೆ ಸುಸ್ಥಿರ ಭವಿಷ್ಯವನ್ನು ಸೃಷ್ಟಿಸಲು ಬದ್ಧರಾಗಿದ್ದಾರೆ. ಅವರು ತಮ್ಮ ಎಲ್ಲಾ ಹೋಟೆಲ್‌ಗಳಲ್ಲಿ ಹಸಿರು ಉಪಕ್ರಮಗಳನ್ನು ಜಾರಿಗೆ ತರಲು ಯೋಜಿಸಿದ್ದಾರೆ ಮತ್ತು ಆ ಪ್ರದೇಶದಲ್ಲಿನ ಇತರೆ ವ್ಯವಹಾರಗಳನ್ನು ಅದೇ ರೀತಿ ಮಾಡಲು ಪ್ರೇರೇಪಿಸಲು ಆಶಿಸುತ್ತಿದ್ದಾರೆ.



ಒಟ್ಟಾಗಿ ಕೆಲಸ ಮಾಡುವ ಮೂಲಕ ಸಮುದಾಯದ ಎಲ್ಲಾ ನಿವಾಸಿಗಳಿಗೆ ಆರೋಗ್ಯಕರ, ಹೆಚ್ಚು ಸುಸ್ಥಿರ ಭವಿಷ್ಯವನ್ನು ರಚಿಸಬಹುದು ಎಂದು ಸುರ್ಜಿತ್ ನಂಬಿದ್ದಾರೆ. ಕೊನೆಯಲ್ಲಿ, ಸುರ್ಜಿತ್ ಜಿ ಅವರು ದೂರದೃಷ್ಟಿಯ ಉದ್ಯಮಿ ಮತ್ತು ದಾವಣಗೆರೆ ಉತ್ತರ ಕ್ಷೇತ್ರದ ಜನರ ಜೀವನ ಸುಧಾರಿಸಲು ಬದ್ಧರಾಗಿರುವ ಸಮುದಾಯದ ನಾಯಕರಾಗಿದ್ದಾರೆ.

ಶಿಕ್ಷಣ, ಆರೋಗ್ಯ, ಉದ್ಯೋಗ, ವಸತಿ ಮತ್ತು ಸುಸ್ಥಿರತೆಯ ಮೇಲೆ ಅವರ ಗಮನವು ಅವರನ್ನು ಶಾಸಕರ ಪ್ರಬಲ ಅಭ್ಯರ್ಥಿಯನ್ನಾಗಿ ಮಾಡುತ್ತದೆ. ಚುನಾಯಿತರಾದರೆ, ಕ್ಷೇತ್ರವು ಅಭಿವೃದ್ಧಿ ಹೊಂದಲು ಮತ್ತು ಬೆಳೆಯಲು ಅಗತ್ಯವಿರುವ ಬೆಂಬಲವನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಅವಿರತವಾಗಿ ಶ್ರಮಿಸುತ್ತಿರುವ ಸುರ್ಜಿತ್ ಅವರಿಗೆ ಸಹೋದರ **ಸುಜನ್ ಜಿ.** ಸಾಥ್ ನೀಡುತ್ತಿದ್ದಾರೆ.



ಧರ್ಮಪತ್ನಿ ಶ್ರೀಮತಿ ಗೌತಮಿ ಹೆಚ್.ಎಸ್.
ಮತ್ತು ಪುತ್ರಿ ಕು. ಶ್ರದ್ಧವೀ ಎಸ್.ಜಿ. ಅವರೊಂದಿಗೆ
ಶ್ರೀ ಸುರ್ಜಿತ್ ಜಿ.

# ಸಡಗರ-ಸಂಭ್ರಮದ ರಂಜಾನ್ ಆಚರಣೆ



**ಹರಪನಹಳ್ಳಿ**

ಹರಪನಹಳ್ಳಿ.ಏ.22- ಶ್ರದ್ಧಾ - ಭಕ್ತಿಯ ಪವಿತ್ರ ರಂಜಾನ್ ಹಬ್ಬವನ್ನು ಪಟ್ಟಣದಲ್ಲಿ ಇಂದು ಸಡಗರ-ಸಂಭ್ರಮದಿಂದ ಆಚರಿಸಲಾಯಿತು.

ಮುಸ್ಲಿಂ ಬಾಂಧವರು ಪಟ್ಟಣದ ಮೂರೂ ಕಡೆಗಳಲ್ಲಿ ಸಾಮೂಹಿಕ ಪ್ರಾರ್ಥನೆ ನೆರವೇರಿಸುವ ಮೂಲಕ ರಂಜಾನ್ ಹಬ್ಬದ ಮೆರಗು ಹೆಚ್ಚಿಸಿದರು.

ಹೊಸಪೇಟೆ ರಸ್ತೆಯ ತರಳಬಾಳು ಕಲ್ಯಾಣ ಮಂಟಪ ಹಿಂಭಾಗದ ದರ್ಗಾದಲ್ಲಿ ಆಲಿ ಅದೀಸ್ ಪಂಗಡದ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಹಡಗಲಿ ರಸ್ತೆಯ ದರ್ಗಾದಲ್ಲಿ ಅಲಿ ಸುನ್ನಿ ಪಂಗಡದವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಎಚ್.ಪಿ.ಎಸ್ ಕಾಲೇಜು ಹಿಂಭಾಗ ಹಕ್ ಸಮಿತಿಯವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಸಾವಿರಾರು ಮಂದಿ ಮುಸ್ಲಿಂ ಮಹಿಳೆಯರೂ ಸಹ ಸಾಮೂಹಿಕ ಪ್ರಾರ್ಥನೆ ನೆರವೇರಿಸಿದರು. ಇದಕ್ಕಾಗಿ ಹೊಸಪೇಟೆ ರಸ್ತೆಯ ಈದ್ಗಾ ಮೈದಾನದಲ್ಲಿ ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿತ್ತು. ಒಂದೆಡೆ ಸೇರಿದ್ದ ಮುಸ್ಲಿಂ ಮಹಿಳೆಯರು ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಸ್ಥಳಕ್ಕೆ ಪಕ್ಷೇತರ ಅಭ್ಯರ್ಥಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಭೇಟಿ ನೀಡಿ ಹಬ್ಬದ ಶುಭ ಕೋರಿದರು.

ತರಳಬಾಳು ಕಲ್ಯಾಣ ಮಂಟಪ ಹಿಂಭಾಗದ ದರ್ಗಾದಲ್ಲಿ ಜರುಗಿದ ಸಾಮೂಹಿಕ ಪ್ರಾರ್ಥನೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅರಸಿಕೇರಿ ಎನ್. ಕೊಟ್ರೇಶ್. ಜೆ.ಡಿ.ಎಸ್ ಅಭ್ಯರ್ಥಿ ನೂರ್‌ಅಹಮದ್ ಹಾಗೂ ಮುಖಂಡರಾದ ಹೆಚ್.ಎಂ. ಮಲ್ಲಿಕಾರ್ಜುನ ಭಾಗವಹಿಸಿ ಹಬ್ಬದ ಶುಭ ಕೋರಿದರು.

ಈ ವೇಳೆ ಅಂಜುಮನ್ ಅಧ್ಯಕ್ಷ ಮುಜುಬರ್ ರೆಹಮಾನ್ ಸಾಬ್, ಕೆ.ಪಿ.ಸಿ.ಸಿ ಸಂಯೋಜಕ ಬಿ.ನಜೀರ್, ಪುರಸಭೆ ಸದಸ್ಯರುಗಳಾದ ಡಿ.ಅಬ್ದುಲ್ ರೆಹಮಾನ್, ಎಂ.ವಿ. ಅಂಜಿನಪ್ಪ, ಜಾಕೀರ್ ಹುಸೇನ್, ಲಾಟಿ ದಾದಾ ಪೀರ್, ಟಿ.ವೆಂಕಟೇಶ್, ಎಂ.ಕೆ.ಜಾವೇದ್, ಮುಖಂಡರಾದ ಸಿ.ಜಾವೇದ್, ಬೆಲ್ದಾರ್‌ಭಾ ಷಾಸಾಬ್, ಎ.ಮೂಸಾ ಸಾಬ್, ಇರ್ಷಾದ್ ಬಾಷಾ, ಮಾಬೂಷಾ, ಬಿ.ಶೇಕ್‌ಷಾ ವಲಿ, ರಾಜಾಸಾಬ್, ಎಂ.ಜಾಫರ್, ಉಮರ್‌ಸಾಬ್, ಸೋಗಿ ಇಬ್ರಾಹಿಂ, ಗುಂಡಿನಕೇರಿ ಸತ್ತಾರಸಾಬ್ ಸೇರಿದಂತೆ ಮುಸ್ಲಿಂ ಬಾಂಧವರು ಭಾಗವಹಿಸಿದ್ದರು.

# ಧ್ವಜ ಬದಲಾದ ತಕ್ಷಣ ಭಾವನೆ ಬದಲಾಗಲು ಸಾಧ್ಯವಿಲ್ಲ



**ಬಿಜೆಪಿಗೆ ತದ್ವಿರುದ್ಧವಾದ ಸಿದ್ಧಾಂತಗಳಿರುವ ಕಾಂಗ್ರೆಸ್ ಪಕ್ಷಕ್ಕೆ ಮಾಜಿ ಸಿಎಂ ಜಗದೀಶ ಶೆಟ್ಟರ್ ಹೋಗಿರುವುದು ದೌರ್ಭಾಗ್ಯದ ಸಂಗತಿ.**
**- ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಮಾಜಿ ಮುಖ್ಯ ಸಚೇತಕರು, ವಿಧಾನ ಪರಿಷತ್**

ದಾವಣಗೆರೆ, ಏ. 22- ಧ್ವಜ ಬದಲಾದ ತಕ್ಷಣ ಭಾವನೆಗಳು, ವಿಚಾರಗಳು, ಒಪ್ಪಿಕೊಂಡಿದ್ದ ಸಿದ್ಧಾಂತಗಳು ಬದಲಾಗಲು ಸಾಧ್ಯವಿಲ್ಲ ಎಂದು ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ ವಿಶ್ಲೇಷಿಸಿದರು.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇವಲ ಟಿಕೆಟ್ ಸಿಗಲಿಲ್ಲವೆಂಬ ಒಂದೇ ಕಾರಣಕ್ಕೆ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿರುವುದು ದೌರ್ಭಾಗ್ಯದ ಸಂಗತಿ. ಇದರಿಂದ ಅವರು ನಂಬಿದ್ದ ಸಿದ್ಧಾಂತ ಏನಾಯಿತು? ಎಂದು ಪ್ರಶ್ನಿಸಿದರು.

ಬಿ.ಎಲ್. ಸಂತೋಷ್ ಜೀ ಅವರ ಬಗ್ಗೆ ಟೀಕೆ ಮಾಡಿರುವುದು ಆತ್ಮ ವಂಚನೆ ಮಾಡಿಕೊಂಡಂತೆ. ಲಿಂಗಾಯತರಿಗೆ ಅನ್ಯಾಯ ಮಾಡಿದ್ದಾರೆಂಬ ಆರೋಪ ಮಾಡಿರುವುದು ಅಕ್ಷಮ್ಯ ಎಂದರು.

ಬಿಜೆಪಿಯ ಸಾಮಾನ್ಯ ಕಾರ್ಯಕರ್ತನನ್ನು ಶಾಸಕನನ್ನಾಗಿ, ಸಚಿವನನ್ನಾಗಿ, ಮುಖ್ಯಮಂತ್ರಿಯನ್ನಾಗಿ, ಪಕ್ಷದ ರಾಜ್ಯಾಧ್ಯಕ್ಷರನ್ನಾಗಿ ಸಹ ಮಾಡಿದ್ದಲ್ಲದೇ ಆರು ಬಾರಿ ಶಾಸಕರಾಗಲು ಅವಕಾಶ ನೀಡಿದ ನಂತರವೂ ಮತ್ತೊಮ್ಮೆ ಸ್ಪರ್ಧಿಸಲು ಅವಕಾಶ ನೀಡಲಿಲ್ಲ ಎಂಬ ಕಾರಣಕ್ಕಾಗಿ ಪಕ್ಷ ತೊರೆದು ಕಾಂಗ್ರೆಸ್ ಸೇರಿರುವುದು ಬಿಜೆಪಿ ಕಾರ್ಯಕರ್ತರಿಗೆ ತುಂಬಾ ನೋವುಂಟು ಮಾಡಿದೆ ಎಂದು ಹೇಳಿದರು.

ಲಿಂಗಾಯತರಿಗೆ ಬಿಜೆಪಿ ಅನ್ಯಾಯ ಮಾಡಿದೆ ಎಂದು ಬೊಬ್ಬೆ ಹಾಕುವುದರಿಂದ ಕಾಂಗ್ರೆಸ್‌ಗೆ ಯಾವ ಲಾಭವೂ ಇಲ್ಲ. ಕಾಂಗ್ರೆಸ್ ಕುತಂತ್ರಕ್ಕೆ ಲಿಂಗಾಯತ ಸಮುದಾಯ ಬಲಿಯಾಗುವುದಿಲ್ಲ. ಏಕೆಂದರೆ ಲಿಂಗಾಯತ ಸಮುದಾಯ ಪ್ರಜ್ಞಾವಂತ ಸಮಾಜವಾಗಿದೆ ಎಂದರು.

ಕಾಂಗ್ರೆಸ್ ಪಕ್ಷ ಲಿಂಗಾಯತರನ್ನು ಯಾವ ರೀತಿ ನಡೆಸಿಕೊಂಡಿದೆ ಎಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. 1969 ರಲ್ಲಿ ಎಸ್. ನಿಜಲಿಂಗಪ್ಪ ಅವರು ರಾಷ್ಟ್ರೀಯ ಅಧ್ಯಕ್ಷರಾಗಿದ್ದಾಗ ಕಾಂಗ್ರೆಸ್ ಪಕ್ಷವನ್ನು ವಿಭಜಿಸಿ, ಅವರನ್ನು ಮೂಲೆಗುಂಪು ಮಾಡಿದ್ದು ಇಂದಿರಾಗಾಂಧಿ. 1990 ರಲ್ಲಿ ಅಂದಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲರನ್ನು ಅವರ ಅನಾರೋಗ್ಯದ ಸ್ಥಿತಿಯಲ್ಲಿ ಅತ್ಯಂತ ಅಗೌರವದಿಂದ ಕೆಳಗಿಳಿಸಿದ್ದು ಮಾಜಿ ಪ್ರಧಾನಿ ರಾಜೀವ್‌ಗಾಂಧಿ. ಅಂದಿನಿಂದ ಇದುವರೆಗೂ ಕಳೆದ 23 ವರ್ಷಗಳಲ್ಲಿ ಯಾವುದೇ ಲಿಂಗಾಯತರನ್ನು ಕಾಂಗ್ರೆಸ್ ಮುಖ್ಯಮಂತ್ರಿ ಮಾಡಿರುವುದಿಲ್ಲ ಎಂದು ಹೇಳಿದರು.

ಮಾಯಕೊಂಡ ಕ್ಷೇತ್ರದಲ್ಲಿನ ಭಿನ್ನಮತವನ್ನು ಶಮನಗೊಳಿಸುವ ಪ್ರಯತ್ನ ನಡೆಯುತ್ತಿದೆ. ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳ ಗೆಲುವು ಶತಸಿದ್ಧ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ವಕ್ತಾರ ಡಿ.ಎಸ್. ಶಿವಶಂಕರ್, ಮುಖಂಡರಾದ ಸುಧಾ ಜಯರುದ್ರೇಶ್, ಪಾಲಿಕೆ ಸದಸ್ಯ ಪ್ರಸನ್ನಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಚಳ್ಳಕೆರೆ: ಪಕ್ಷೇತರ ಅಭ್ಯರ್ಥಿ ಕುಮಾರಸ್ವಾಮಿ ನಾಮಪತ್ರ ಸಲ್ಲಿಕೆ

ಚಳ್ಳಕೆರೆ, ಏ. 22- ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ಮಾಜಿ ಸಚಿವರ ಪುತ್ರ ಕೆ.ಟಿ. ಕುಮಾರಸ್ವಾಮಿ ಅವರು ನಾಮಪತ್ರ ಸಲ್ಲಿಸಿದರು. ಯಾವುದೇ ಪಕ್ಷಗಳಿಗೆ ಹೋಗದೇ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವಂತೆ ಮತದಾರರ, ಅಭಿಮಾನಿಗಳ ಅಪೇಕ್ಷೆಯಂತೆ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದೇನೆ ಎಂದು ಕುಮಾರಸ್ವಾಮಿ ಸುದ್ದಿಗಾರರಿಗೆ ತಿಳಿಸಿದರು.

## ಗಂಗನರಸಿಯಲ್ಲಿ ಇಂದು ಸಾಮೂಹಿಕ ವಿವಾಹ

ಹರಿಹರ ತಾಲ್ಲೂಕು ಗಂಗನರಸಿ ಗ್ರಾಮದಲ್ಲಿ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠ ಹಾಗೂ ಶ್ರೀ ಹನುಮಂತ ದೇವರ ಜೀರ್ಣೋದ್ಧಾರ ಸಮಿತಿ ವತಿಯಿಂದ ಇಂದು ಬೆಳಿಗ್ಗೆ 11.30 ಕ್ಕೆ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಸಮುದಾಯ ಭವನದ ಕೆಳಮಹಡಿಯ ಭೋಜನಾ ಶಾಲೆಯ ಉದ್ಘಾಟನಾ ಸಮಾರಂಭ ಹಾಗೂ ಸರ್ವ ಧರ್ಮೀಯರ ಉಚಿತ ಸಾಮೂಹಿಕ ವಿವಾಹ ನಡೆಯಲಿದೆ.

ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ, ಶ್ರೀ ಪಟ್ಟದ ಚಿನ್ಮಯಿ ಸ್ವಾಮೀಜಿ, ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ, ಶ್ರೀ ವಚನಾನಂದ ಸ್ವಾಮೀಜಿ, ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಶಾಮನೂರು ಶಿವಶಂಕರಪ್ಪ ಅವರು ಭೋಜನಾ ಶಾಲೆ ಉದ್ಘಾಟಿಸುವರು. ಸಮಿತಿ ಅಧ್ಯಕ್ಷ ಜಿ.ಎಂ.ನಾಗೇಂದ್ರಪ್ಪ ಅಧ್ಯಕ್ಷತೆ ವಹಿಸುವರು. ಬಿ.ಎಂ. ವೀರಪ್ಪ, ಕಾರ್ಯದರ್ಶಿ ಗೌಡ್ರು ಚನ್ನಬಸಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

## ಇಂದು ದಾವಣಗೆರೆ ದಕ್ಷಿಣ ವಿಧಾನಸಭಾ ಅಭ್ಯರ್ಥಿ ಅಜಯ್ ಕುಮಾರ್ ಪ್ರಚಾರ



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅಜಯ್ ಕುಮಾರ್ ಬಿ.ಜಿ. ಅವರು ತಮ್ಮ ಪ್ರಚಾರವನ್ನು ಇಂದು ಬೆಳಿಗ್ಗೆ 7.30 ರಿಂದ 5ನೇ ವಾರ್ಡ್ ಎಸ್.ಪಿ.ಎಸ್ ನಗರದ ಶ್ರೀ ಆಂಜನೇಯ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಆರಂಭಿಸುವರು.

ಸಂಜೆ 4.30 ರಿಂದ 6ನೇ ವಾರ್ಡ್ ಕುರುಬರ ಬೀದಿ, ಶಿಬಾರ, ಕೊಂಡಜ್ಜಿ ರಸ್ತೆಯ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನದಿಂದ ಪ್ರಚಾರ ಮಾಡುವರು. ನಿಕಟಪೂರ್ವ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ದಕ್ಷಿಣ ಮಂಡಲ ಅಧ್ಯಕ್ಷ ಆನಂದರಾವ್ ಶಿಂಧೆ ಭಾಗವಹಿಸಲಿದ್ದಾರೆ ಎಂದು ದಕ್ಷಿಣ ಮಂಡಲ ಪ್ರಧಾನ ಕಾರ್ಯದರ್ಶಿ ರಾಜು ನೀಲಗುಂದ ತಿಳಿಸಿದ್ದಾರೆ.

# ಹರಿಹರಕ್ಕೆ ನಾಳೆ ಸಿಎಂ ಬಸವರಾಜ ಬೊಮ್ಮಾಯಿ



ಹರಿಹರ, ಏ. 22 – ಹರಿಹರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಪಿ. ಹರೀಶ್ ಅವರ ಪರವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಾಡಿದ್ದು ದಿನಾಂಕ 24 ರ ಸೋಮವಾರ ಬೆಳಗ್ಗೆ ಹರಿಹರ ನಗರಕ್ಕೆ ಪ್ರಚಾರ ಮಾಡಲು ಆಗಮಿಸಲಿದ್ದಾರೆ ಎಂದು ಬಿಜೆಪಿ ಪಕ್ಷದ ಜಿಲ್ಲಾ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ನಾಳೆ ಸೋಮವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಎಸ್ಸಿ ಮೋರ್ಚಾ ಅಧ್ಯಕ್ಷ ಚಲವಾದಿ ನಾರಾಯಣ ಸ್ವಾಮಿ, ಸಂಸದ ಜಿ.ಎಂ. ಸಿದ್ದೇಶ್ವರ ಸೇರಿದಂತೆ ಹಲವಾರು ಪ್ರಮುಖ ನಾಯಕರು ನಗರಕ್ಕೆ ಆಗಮಿಸಲಿದ್ದಾರೆ. ಬೆಳಗ್ಗೆ 10 ಗಂಟೆಗೆ ಪಕ್ಕೀರಸ್ವಾಮಿ ಮಠದ ಆವರಣದ ಮುಂಭಾಗದಿಂದ ಬೃಹತ್ ರೋಡ್ ಶೋ ನಡೆಸಿ ನಂತರ ಗಾಂಧಿ ವೃತ್ತದಲ್ಲಿ ಅಂತ್ಯ ಮಾಡಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರ ಘಟಕದ ಬಿಜೆಪಿ ಅಧ್ಯಕ್ಷ ಅಜಿತ್ ಸಾವಂತ್, ಪ್ರಧಾನ ಕಾರ್ಯದರ್ಶಿಗಳಾದ ತುಳಜಪ್ಪ ಭೂತೆ, ಹೆಚ್. ಮಂಜಾನಾಯ್ಕ್, ತಾಪಂ ಮಾಜಿ ಅಧ್ಯಕ್ಷ ಐರಣಿ ಅಣ್ಣಪ್ಪ, ಮುಖಂಡರಾದ ಬಾತಿ ಚಂದ್ರಪ್ಪ, ರಾಮನಗೌಡ ಜಿಗಳಿ, ಪ್ರವೀಣ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ವಿನೋಬನಗರದಲ್ಲಿ ಇಂದು ನಾಗರಾಜ್ ಲೋಕಿಕೆರೆ ಪ್ರಚಾರ



ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ಇಂದು ಬೆಳಗ್ಗೆ 7.30ಕ್ಕೆ ವಿನೋಬನಗರದ ಒಂದನೇ ಮುಖ್ಯ ರಸ್ತೆಯಲ್ಲಿರುವ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ನಾಗರಕಟ್ಟೆ ಇಲ್ಲಿಂದ 15 ಮತ್ತು 16ನೇ ವಾರ್ಡ್ ಗಳಲ್ಲಿ ಪ್ರಚಾರ ಕೈಗೊಳ್ಳಲಿದ್ದಾರೆ.

ಸಂಜೆ 4.30ಕ್ಕೆ ವಿನೋಬನಗರದ ಮೂರನೇ ಮುಖ್ಯ ರಸ್ತೆಯಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಿಂದ 22 ಮತ್ತು 44ನೇ ವಾರ್ಡ್‌ಗಳಲ್ಲಿ ಮತಯಾಚಿಸಲಿದ್ದಾರೆ.

## ದವನ್ ಕಾಲೇಜಿನ ಗೌರಿ ಕಾಮರ್ಸ್‌ನಲ್ಲಿ ಜಿಲ್ಲೆಗೆ ದ್ವಿತೀಯ



ದಾವಣಗೆರೆ, ಏ. 22- ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ದವನ್ ಪಿಯು ಕಾಲೇಜಿಗೆ ಶೇ. 94 ಫಲಿತಾಂಶ ಲಭಿಸಿದ್ದು, 49 ವಿದ್ಯಾರ್ಥಿಗಳು ಶೇ. 85ಕ್ಕೂ ಹೆಚ್ಚಿನ ಫಲಿತಾಂಶ ಪಡೆದಿದ್ದಾರೆ.

ಜಿಲ್ಲೆಗೆ ದ್ವಿತೀಯ ಟಾಪರ್, ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿರುವ ನಗರದ ಶ್ರೀಮತಿ ದೀಪ ಮತ್ತು ಕುಮಾರ್ ಎನ್. ದಂಪತಿ ಪುತ್ರಿ ಕೆ. ಗೌರಿ (586-97.67%) ಲೆಕ್ಕ ಶಾಸ್ತ್ರ ಹಾಗೂ ಸಂಖ್ಯಾ ಶಾಸ್ತ್ರದಲ್ಲಿ 100ಕ್ಕೆ 100 ಅಂಕ ಪಡೆದಿದ್ದಾರೆ. ದ್ವಿತೀಯ ಸ್ಥಾನ ಪಡೆದಿರುವ ಎಂ.ಆರ್. ಲಿಖಿತ್ (586-97.50%) ಲೆಕ್ಕ ಶಾಸ್ತ್ರ ವಿಷಯದಲ್ಲಿ 100ಕ್ಕೆ 100 ಅಂಕ ಪಡೆದಿರುತ್ತಾರೆ. ಹಾಗೂ ಜೈನ್ ಪಲಕ್ ರಾಜೇಶ್ (583-97.17%) ಲೆಕ್ಕಶಾಸ್ತ್ರ ಹಾಗೂ ಸಂಖ್ಯಾಶಾಸ್ತ್ರದಲ್ಲಿ 100ಕ್ಕೆ 100 ಅಂಕ ಪಡೆದಿದ್ದಾರೆ.

ಉತ್ತಮ ಫಲಿತಾಂಶ ಪಡೆದ ವಿದ್ಯಾರ್ಥಿಗಳಿಗೆ ಗೌ. ಕಾರ್ಯದರ್ಶಿ ವೀರೇಶ್ ಪಟೇಲ್, ಜಂಟಿ ಕಾರ್ಯದರ್ಶಿ ಡಾ. ಜಿ.ಎಸ್. ಅಂಜು, ನಿರ್ದೇಶಕ ಹರ್ಷರಾಜ್ ಎ. ಗುಜ್ಜರ್, ಶೈಕ್ಷಣಿಕ ಸಲಹೆಗಾರ ಪ್ರೊ. ಬಾತಿ ಬಸವರಾಜ್, ಪ್ರಾಚಾರ್ಯರಾದ ಶ್ರೀಮತಿ ಹೆಚ್.ಸಿ. ಅಶ್ವಿನಿ ಅಭಿನಂದಿಸಿದ್ದಾರೆ.

## ಪುಷ್ಪಾ ಮಹಾಲಿಂಗಪ್ಪ ಪಿಯು ಕಾಲೇಜಿಗೆ ಶೇ.100 ರಷ್ಟು ಫಲಿತಾಂಶ



ದಾವಣಗೆರೆ, ಏ.22- ದ್ವಿತೀಯ ಪಿಯು ಫಲಿತಾಂಶದಲ್ಲಿ ಹಳೇಬಾತಿ ಗ್ರಾಮದ ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ಪದವಿ ಪೂರ್ವ ಕಾಲೇಜು ಶೇ. 100 ರಷ್ಟು ಫಲಿತಾಂಶ ಪಡೆದಿದೆ. 40 ಅತ್ಯುನ್ನತ ಶ್ರೇಣಿ, 29 ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಗ್ರಾಮೀಣ ಪ್ರದೇಶದ ಕಾಲೇಜು ಶೇ. 100 ರಷ್ಟು ಫಲಿತಾಂಶ ಪಡೆದ ಎರಡನೆಯ ಕಾಲೇಜಾಗಿದೆ. ಬಿಂದು ಜಿ.ಎನ್. 582 ಅಂಕ ಪಡೆಯುವ ಮೂಲಕ ಜಿಲ್ಲೆಯ ಗ್ರಾಮಾಂತರ ಕಾಲೇಜಿನ 2ನೇ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದಾರೆ. ಇವರು ಕನ್ನಡ 98, ಇಂಗ್ಲಿಷ್ 95, ಭೌತಶಾಸ್ತ್ರ 97, ರಸಾಯನ ಶಾಸ್ತ್ರ 94, ಗಣಿತ ಶಾಸ್ತ್ರ 98, ಜೀವಶಾಸ್ತ್ರ 100 ಪಡೆದಿರುತ್ತಾರೆ. ಪ್ರಾಂಶುಪಾಲರು ವಿದ್ಯಾರ್ಥಿನಿಗೆ ಅಭಿನಂದಿಸಿದ್ದಾರೆ.

ಈ ಹಿಂದೆ 2017, 2018, 2019 ನೇ ವರ್ಷಗಳಲ್ಲಿ ನಿರಂತರ ಶೇ. 100 ಫಲಿತಾಂಶ ಪಡೆದು ಹ್ಯಾಟ್ರಿಕ್ ಸಾಧಿಸಿದ ಕೀರ್ತಿ ಈ ಕಾಲೇಜಿಗೆ ಇದ್ದು, ಮತ್ತೆ ಅದನ್ನು ಮರಳಿ ಪಡೆಯುವ ಪ್ರಯತ್ನಕ್ಕೆ ಉಪನ್ಯಾಸಕರು, ವ್ಯವಸ್ಥಾಪಕ ಮಂಡಳಿ ಕೈಜೋಡಿಸಿದ್ದಾರೆ.

ಸ್ವಾಮಿ ವಿವೇಕಾನಂದ ಬಡಾವಣೆಯ ಶ್ರೀಮತಿ ಪುಷ್ಪ ಶಾಮನೂರು ಮಹಾಲಿಂಗಪ್ಪ ಪದವಿ ಪೂರ್ವ ಕಾಲೇಜಿನಲ್ಲಿ ಒಟ್ಟು 167 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ರಾಹುಲ್ ಸುತ್ತುಕೋಟಿ 571 ಅಂಕ ಪಡೆದು ಹೆಚ್ಚು ಅಂಕ ಪಡೆದ ವಿದ್ಯಾರ್ಥಿಯಾಗಿದ್ದಾನೆ. 41 ಅತ್ಯುನ್ನತ, ದರ್ಜೆ, 111 ಪ್ರಥಮ ಶ್ರೇಣಿ, 12 ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಕಾಲೇಜಿಗೆ ಸರಾಸರಿ ಶೇ. 98.20 ರಷ್ಟು ಫಲಿತಾಂಶ ಬಂದಿದೆ.

ಒಟ್ಟಾರೆ ಫಲಿತಾಂಶದಲ್ಲಿ ಅತ್ಯುತ್ತಮ ಫಲಿತಾಂಶ ಶಾಮನೂರು ಶಿಕ್ಷಣ ಸಂಸ್ಥೆಗೆ ಬಂದಿದೆ. 81 ಅತ್ಯುನ್ನತ ಶ್ರೇಣಿ, 140 ಪ್ರಥಮ ಶ್ರೇಣಿ, 12 ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

## ಕಾರಿಗನೂರು ಮೊರಾರ್ಜಿ ದೇಸಾಯಿ ಕಾಲೇಜಿಗೆ ಶೇ.100 ಫಲಿತಾಂಶ

ಚನ್ನಗಿರಿ, ಏ.22- ಕಾರಿಗನೂರು ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ವಿಜ್ಞಾನ ಪಿಯು ಕಾಲೇಜಿಗೆ ಪಿಯುಸಿ ಪರೀಕ್ಷೆಯಲ್ಲಿ ಶೇ. 100 ಕ್ಕೆ 100 ಫಲಿತಾಂಶ ಲಭಿಸಿದೆ. ಪರೀಕ್ಷೆಗೆ ಕುಳಿತಿದ್ದ ಎಲ್ಲಾ 75 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 7 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 60 ವಿದ್ಯಾರ್ಥಿಗಳು ಪ್ರಥಮ, 7 ವಿದ್ಯಾರ್ಥಿಗಳು ದ್ವಿತೀಯ ಹಾಗೂ ಒಬ್ಬ ವಿದ್ಯಾರ್ಥಿ ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ಕಾಲೇಜಿಗೆ ಅತ್ಯುನ್ನತ ಅಂಕ 564 ಲಭ್ಯವಾಗಿದೆ. ಕಾಲೇಜಿನ ಪ್ರಾಚಾರ್ಯರಾದ ಡಾ. ಸತೀಶ್ ಅವರು ಎಲ್ಲಾ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.


**ಮಕ್ಕಳ ಉಚಿತ ದಂತ ತಪಾಸಣಾ ಶಿಬಿರ**

ಯಾರಿಗೆ - 1 ರಿಂದ 14 ವರ್ಷದ ಮಕ್ಕಳಿಗೆ
ಯಾವಾಗ - ಏಪ್ರಿಲ್ 1 ರಿಂದ 30 ರವರೆಗೆ (ಭಾನುವಾರ ರಜೆ)
ಸಮಯ - ಬೆಳಿಗ್ಗೆ 11 ರಿಂದ ಸಂಜೆ 7 ರವರೆಗೆ



ಸ್ಥಳ :
ಅರಿವು ದಂತ ಚಿಕಿತ್ಸಾಲಯ
# 635, 7ನೇ ಮೇನ್, 7ನೇ ಕ್ರಾಸ್, ಪಿಜೆ ಎಕ್ಸ್‌ಟೈನ್ಷನ್, ದಾವಣಗೆರೆ.
Ph. : 70196 88355, 80730 26271


## ಇಂದು ಬಸವ ಬಳಗದಿಂದ ಇಷ್ಟಲಿಂಗ ಪೂಜೆ

ಬಸವ ಜಯಂತಿ ಅಂಗವಾಗಿ ಸರಸ್ವತಿ ದಾವಣಗೆರೆಯ ಬಸವ ಮಹಾಮನೆಯಲ್ಲಿ ಇಂದು ಬೆಳಿಗ್ಗೆ 7 ಗಂಟೆಗೆ ಷಟ್‌ಸ್ಥಲ ಧ್ವಜಾರೋಹಣ ಮತ್ತು ಸಾಮೂಹಿಕ ಇಷ್ಟಲಿಂಗ ಪೂಜೆ, ನಂತರ ಪ್ರಸಾದ ವ್ಯವಸ್ಥೆ ಏರ್ಪಡಿಸಲಾಗಿದೆ.

ಸಂಜೆ 4.30 ಕ್ಕೆ ಅನುಭಾವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಬಸವ ಬಳಗದ ಅಧ್ಯಕ್ಷ ಎ.ಹೆಚ್.ಹುಚ್ಚಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಶಿರಮಗೊಂಡನಹಳ್ಳಿ ತಪೋವನದ ಶ್ರೀಗಳಾದ ಶಿವಾನಂದ ಗುರೂಜಿ, ಗೀತಾ ಬಸವರಾಜ್ ಆಗಮಿಸುವರು.

## ಮತದಾನ ಜಾಗೃತಿ ಅಂಗವಾಗಿ ಇಂದು ಜಲಸಾಹಸ, ಭೂ ಸಾಹಸ ಕ್ರೀಡೆಗಳು

ಜಿಲ್ಲಾ ಪಂಚಾಯತ್ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ದಾವಣಗೆರೆ ಇವರ ಸಹಯೋಗದಲ್ಲಿ ಮತದಾರರ ಜಾಗೃತಿ ಅರಿವು ಕಾರ್ಯಕ್ರಮದ ಅಂಗವಾಗಿ ಇಂದು ಮತ್ತು ನಾಡಿದ್ದು ದಿನಾಂಕ 25 ರಂದು ಜಲಸಾಹಸ ಮತ್ತು ಭೂ ಸಾಹಸ ಕ್ರೀಡೆಗಳನ್ನು ಆಯೋಜಿಸಲಾಗಿದೆ.


ಇಂದು ಸಂಜೆ 5 ಗಂಟೆಗೆ ಚನ್ನಗಿರಿ ತಾಲ್ಲೂಕಿನ ಶಾಂತಿಸಾಗರದಲ್ಲಿ ಜಲಸಾಹಸ ಕ್ರೀಡೆಯಾದ ಕಯಾಕಿಂಗ್ ಆಯೋಜಿಸಲಾಗಿದೆ ಮತ್ತು ನಾಡಿದ್ದು ದಿನಾಂಕ 25 ರಂದು ಸಂಜೆ 5 ಗಂಟೆಗೆ ದಾವಣಗೆರೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಭೂ ಸಾಹಸ ಕ್ರೀಡೆಯಾದ ವಾಲ್ ಕ್ಲೈಂಬಿಂಗ್ ಆಯೋಜಿಸಲಾಗಿದೆ.

ಈ ಕಾರ್ಯಕ್ರಮಗಳಲ್ಲಿ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಹಿಟ್ನಾಳ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ ರಿಷ್ಯಂತ್ ಭಾಗವಹಿಸುವರೆಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಸುಚೇತಾ ನೆಲವಿಗಿ ತಿಳಿಸಿದ್ದಾರೆ.

## ನಗರದಲ್ಲಿಂದು ಮಾಂಸ ಮಾರಾಟ ನಿಷೇಧ

ಬಸವ ಜಯಂತಿ ಪ್ರಯುಕ್ತ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇಂದು ಪ್ರಾಣಿ ವಧೆ, ಪ್ರಾಣಿ ಹಾಗೂ ಮೀನಿನ ಮಾಂಸ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಮಾಂಸ ಮಾರಾಟ ಮಾಡಿದ್ದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದೆಂದು ಪಾಲಿಕೆ ಆರೋಗ್ಯಾಧಿಕಾರಿಗಳು ಎಚ್ಚರಿಸಿದ್ದಾರೆ.


**ಕಾಣೆಯಾಗಿದ್ದಾರೆ**



ದಾವಣಗೆರೆ ಕೆಟಿಜೆ ನಗರ 2ನೇ ಮೇನ್ 16ನೇ ಕ್ರಾಸ್ ವಾಸಿ
**ದೇವರಹಟ್ಟಿ ಇಸ್ಮಾಯಿಲ್ ಸಾಬ್**
(73 ವರ್ಷ)
ಇವರು ದಿನಾಂಕ 18.4.2023 ರಂದು ರಾತ್ರಿ 9 ಗಂಟೆಗೆ ಬೆಂಗಳೂರಿನ ತಮ್ಮನ ಮನೆಗೆ ಹೋಗಿ ಬರುತ್ತೇನೆಂದು ಹೇಳಿ ಬೆಂಗಳೂರಿಗೂ ಹೋಗದೇ ಕಾಣೆಯಾಗಿರುತ್ತಾರೆ. 5.5 ಅಡಿ ಎತ್ತರ, ಬಿಳಿ ಜುಬ್ಬಾ ಧರಿಸಿದ ದುಂಡು ಮುಖ, ಗೋಧಿ ಮೈಬಣ್ಣ ಇರುವ ಈ ವ್ಯಕ್ತಿಯ ಸುಳಿವು ಸಿಕ್ಕಲ್ಲಿ ಕೆಟಿಜೆ ನಗರ ಪೊಲೀಸ್ ಠಾಣೆಗಾಗಲೀ ಅಥವಾ ಈ ಕೆಳಗಿನ ಮೊಬೈಲ್‌ಗೆ ಸಂಪರ್ಕಿಸಲು ಕೋರಲಾಗಿದೆ.
ಮಗ : ಡಿ.ಐ. ಜಾಕೀರ್ ಹುಸೇನ್,
ಮೊ : 98447 33274, 94802 17186


## ಬೆಳ್ಳಿ ದೀಪ ವಶ : ನಿರಾಣಿ ವಿರುದ್ಧ ಪ್ರಕರಣ

ಬಾಗಲಕೋಟೆ, ಏ. 22 – ಬೀಳಗಿ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿರುವ ಸಚಿವ ಮುರುಗೇಶ್ ನಿರಾಣಿ ವಿರುದ್ಧ ಬೆಳ್ಳಿ ದೀಪಗಳನ್ನು ಹಂಚಿದ ಪ್ರಕರಣ ದಾಖಲಿಸಲಾಗಿದೆ.

ಸಚಿವರಿಗೆ ಸೇರಿದ ಕಾರ್ಖಾನೆಯ ಸಿಬ್ಬಂದಿಯ ಕ್ವಾರ್ಟರ್ಸ್‌ನಿಂದ 21.45 ಲಕ್ಷ ರೂ. ಮೌಲ್ಯದ 963 ಬೆಳ್ಳಿ ದೀಪಗಳನ್ನು ವಶಪಡಿಸಿಕೊಂಡ ನಂತರ ಪ್ರಕರಣ ದಾಖಲಿಸಲಾಗಿದೆ.

ಆರೋಪಿಗಳು ಬಿಜೆಪಿಗೆ ಸೇರಿದವರಾಗಿದ್ದಾರೆ. ಅವರು ನಿರಾಣಿ ಅವರ ಸಕ್ಕರೆ ಕಾರ್ಖಾನೆಯ ಸಿಬ್ಬಂದಿ ಎಂದು ಪೊಲೀಸರು ತಿಳಿಸಿದ್ದಾರೆ.

## ಪಕ್ಷೇತರ ಅಭ್ಯರ್ಥಿಯಾಗಿ ಬಿ. ರಾಜಶೇಖರ್ ಸ್ಪರ್ಧೆ

ದಾವಣಗೆರೆ, ಏ. 22- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ತಾವು ಸ್ಪರ್ಧಿಸಿರುವುದಾಗಿ ಅಭ್ಯರ್ಥಿ ಬಿ. ರಾಜಶೇಖರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಡೈಸಿ ಪ್ರಿಯಾಂಕ, ಕೆ.ಜಿ. ಶಶಿಕುಮಾರ್, ಅಶೋಕ್, ಹಾಲೇಶ್ ಉಪಸ್ಥಿತರಿದ್ದರು.

## ವಿಶ್ವಚೇತನ ವಿದ್ಯಾನಿಕೇತನಕ್ಕೆ ಉತ್ತಮ ಫಲಿತಾಂಶ



ದಾವಣಗೆರೆ, ಏ. 22- ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಶ್ವಚೇತನ ವಿದ್ಯಾನಿಕೇತನ ವಸತಿಯುತ ಪದವಿ ಪೂರ್ವ ಕಾಲೇಜಿಗೆ ಉತ್ತಮ ಫಲಿತಾಂಶ ಲಭಿಸಿದೆ.

ಎಸ್‌ಬಿಎಲ್ ಪ್ರತೀಕ್ ಶೇ. 98 (588), ಜಿ. ವೀರೇಶ ಶೇ. 97.33 (584), ಬಿ.ಆರ್.ರಕ್ಷಿತ, ಎಸ್. ಅಕ್ಷಿತ, ತರುಣ್ ನಾಯ್ಕ್ ವಿ., ತನಿಷಾ ಎಸ್.ಎಂ. ಇವರು ಶೇ. 96.83 (581), ಮಹಾಂತ ರಕ್ಷ ಎಸ್.ಬಿ. ಶೇ. 96.67 (580) ಅಂಕ ಗಳಿಸಿದ್ದಾರೆ. ವಿದ್ಯಾರ್ಥಿಗಳನ್ನು ಕಾರ್ಯದರ್ಶಿ ಶ್ರೀಮತಿ ವಿ. ವಿಜಯಲಕ್ಷ್ಮಿ ಅವರು ಅಭಿನಂದಿಸಿದ್ದಾರೆ.

## ನಗರದಲ್ಲಿ 'ಚಿಣ್ಣರ ಚಿಲಿಪಿಲಿ'

ದಾವಣಗೆರೆ, ಏ. 18 - ನಗರದ ಗೋಲ್ಡನ್ ಪಬ್ಲಿಕ್ ಸ್ಕೂಲ್ ಹಾಗೂ ಕಲಾಕುಂಚ ಡಿ.ಸಿ.ಎಂ. ಶಾಖೆಯ ಸಂಯುಕ್ತಾಶ್ರಯದಲ್ಲಿ ಮೇ 1 ರಿಂದ 14 ರವರೆಗೆ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಮಕ್ಕಳಿಗೆ 'ಚಿಣ್ಣರ ಚಿಲಿಪಿಲಿ' ಬೇಸಿಗೆ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಕುಸುಮಾ ಶಿವಕುಮಾರ್ ತಿಳಿಸಿದ್ದಾರೆ.

ಇದೇ ದಿನಾಂಕ 25ರೊಳಗೆ ಮೊಬೈಲ್ ಸಂಖ್ಯೆ : 78925-04645 ಅನ್ನು ಸಂಪರ್ಕಿಸಿ ಹೆಸರು ನೊಂದಾಯಿಸಬಹುದು. ವಿವರಕ್ಕೆ ಸಂಪರ್ಕಿಸಿ : 99011-22728.

## ಹರಪನಹಳ್ಳಿಯಲ್ಲಿ ಇಂದು ಬಸವೇಶ್ವರ ರಥೋತ್ಸವ

ಬಸವ ಜಯಂತಿ ಅಂಗವಾಗಿ ಬಸವೇಶ್ವರ ರಥೋತ್ಸವ ಇಂದು ಜರುಗಲಿದೆ. ಮೇಗಳಪೇಟೆಯ ತೆಗ್ಗಿನ ಮಠದ ಸರ್ಕಲ್ ನಿಂದ ಕೊಟ್ಟೂರು ರಸ್ತೆಯವರೆಗೆ ನೆರವೇರಲಿದೆ ಎಂದು ಬಸವ ಸಮಿತಿಯ ಅಧ್ಯಕ್ಷ ಟಿ.ಹೆಚ್.ಎಂ. ಶಿವಾನಂದಯ್ಯ ತಿಳಿಸಿದ್ದಾರೆ.


**555 ತೂಕದ ಲೆಕ್ಕದ ಬಟ್ಟೆ ಅಂಗಡಿ**
1KG (Export Quality)
ಪುರುಷರ ಮತ್ತು ಮಕ್ಕಳ ಕಾಟನ್ ರೆಡಿಮೇಡ್ ಬಟ್ಟೆಗಳು ಲಭ್ಯ.
1 ಕೆಜಿ ಬಟ್ಟೆಗೆ ಕೇವಲ 555/- ರೂ. ಗಳಿಂದ ಪ್ರಾರಂಭ.
ದಾವಣಗೆರೆ ಜಿಲ್ಲೆಯಾದ್ಯಂತ ಅತ್ಯಂತ ಕಡಿಮೆ ಬೆಲೆಯಲ್ಲಿ ಲಭ್ಯ.
#787/1, ಹೊಂಡದ ರಸ್ತೆ, ಜನ ಔಷಧಿ ಕೇಂದ್ರ ಪಕ್ಕದಲ್ಲಿ ರೇಲ್ವೆ ಗೇಟ್ ಹತ್ತಿರ, ದಾವಣಗೆರೆ.
Cell : 83102 75164

**ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್**
ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರ್ಯಾಕ್ಟ್ ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.
ಸಂಪರ್ಕಿಸಿ : ಪ್ರಿಯಾಂಕ ಜಿ.ಪಿ., ಇಂಜಿನಿಯರ್
+91 70190 70400
#1066, 2ನೇ ಮೇನ್, 1ನೇ ಕ್ರಾಸ್, ಓಂಕಾರ ಗಣಪತಿ ದೇವಸ್ಥಾನ ಎದುರು, ನಿಜಲಿಂಗಪ್ಪ ಲೇಔಟ್, ದಾವಣಗೆರೆ-577004.

aagey.com
WE'RE HIRING!
Field Executive




S Nijalingappa Layout, Opp Bakkeshwara kalyanamantapa, Akshaya Archade 2nd Floor, Davanagere – 577004
Send resume to hr@aagey.com
QUALIFICATION : PUC (Only Boys) : No - 8
SALARY : 10K + 3 K Petrol Allowance
Two Wheeler must and should.
M : 99646 42877

